ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಬಸರೂರು–ಕುಂದಾಪುರ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಕೋಡಿಬೆಟ್ಟು ರಾಜಲಕ್ಷ್ಮಿ**

ಲೇಖಕರು
**ಮಂಜುನಾಥ್ ಚಾಂದ್**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**BASRURU:** An Introducing Book on the Places in Karnataka that Played a Major Role in the Freedom Struggle, Written by Manjunath Chand, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಮಂಜುನಾಥ್ ಚಾಂದ್

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೭೨


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೭೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

"ಅಸ್ಪೃಶ್ಯತೆ ವಿರುದ್ಧದ ಈ ಹೋರಾಟವನ್ನು ಆತ್ಮ ಶುದ್ಧೀಕರಣ ಹಾಗೂ ಪಶ್ಚಾತ್ತಾಪದ ಚಳವಳಿ ಎಂದು ಕರೆಯುತ್ತೇನೆ"–೧೯೩೪ರಲ್ಲಿ ದೇಶಾದ್ಯಂತ ಕೈಗೊಂಡ ತಮ್ಮ 'ಹರಿಜನ ಪ್ರವಾಸ'ದ ಹಾದಿಯಲ್ಲಿ ಕುಂದಾಪುರಕ್ಕೆ ಭೇಟಿ ನೀಡಿದ ಮಹಾತ್ಮ ಗಾಂಧಿ ಅವರು ಅತ್ಯಂತ ನೋವಿನಿಂದ ಹೇಳಿದ ಮಾತಿದು. 'ಒಂದು ಇಡೀ ಜನಾಂಗವನ್ನು ಪ್ರಭಾವಿಸಿದ, ಸಾಮಾಜಿಕ ಪರಿವರ್ತನೆಯ ಹರಿಕಾರ' ಎಂದೇ ಕರೆಸಿಕೊಂಡಿದ್ದ ಗಾಂಧೀಜಿ ಅವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಪಾದಸ್ಪರ್ಶ ಮಾಡುವುದಕ್ಕೆ ಬಹಳಷ್ಟು ಮೊದಲೇ ಇಲ್ಲಿ ಸಾಮಾಜಿಕ ಪರಿವರ್ತನೆಯ ಕಾರ್ಯ ಆರಂಭವಾಗಿ ಹೋಗಿತ್ತು. ಕುದ್ಮುಲ್ ರಂಗರಾಯರು ಹರಿಜನೋದ್ಧಾರ, ಮಹಿಳಾ ಸಬಲೀಕರಣವನ್ನು ಅಕ್ಷರಶಃಲ್ಲಾಗಲೇ ಕಾರ್ಯರೂಪಕ್ಕೆ ತಂದುಬಿಟ್ಟಿದ್ದರು. ತಮ್ಮದೇ ಆಶಯವನ್ನು ಕಾರ್ಯರೂಪಕ್ಕೆ ತಂದ ಜಿಲ್ಲೆಯ ಬಗ್ಗೆ ಗಾಂಧೀಜಿ ಅವರಿಗೆ ಅಪಾರವಾದ ಕುತೂಹಲವಿತ್ತು. ಆ ಕಾರಣಕ್ಕೆ ಜಿಲ್ಲೆಗೆ ಮೂರು ಬಾರಿ ಪ್ರವಾಸ ನೀಡುವ ಅವರು ಇಲ್ಲಿನ ಹರಿಜನ ಕೇರಿಗಳಿಗೆ ಭೇಟಿ ಕೊಟ್ಟು ಅದರ ಪ್ರಭಾವಕ್ಕೆ ಒಳಗಾಗುತ್ತಾರೆ.

ಆ ಬಳಿಕ ಇಡೀ ಜಿಲ್ಲೆ ಗಾಂಧಿ ಪ್ರಭಾವಕ್ಕೆ ಒಳಗಾಗುತ್ತದೆ, ಅವರ ಮಾತನ್ನು ಅಕ್ಷರಶಃ ಪಾಲಿಸುತ್ತದೆ. 'ಬಸರೂರು–ಕುಂದಾಪುರ' ಈ ಮಾತಿಗೆ ಅಪವಾದವೇನೂ ಅಲ್ಲ. ಈ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡುವಲ್ಲಿ 'ನಿನಗೆ ನೀನೇ ಮಾರ್ಗದರ್ಶಿ' ಎಂಬ ಮಾತನ್ನು ಕಾರ್ಯರೂಪಕ್ಕೆ ತಂದ ಈ ಭಾಗದ ಜನರ ಸ್ವಾತಂತ್ರ್ಯ ಹೋರಾಟ ಚರಿತ್ರಾರ್ಹ. ಕುಂದಾಪುರಕ್ಕೆ ಗಾಂಧಿ ಭೇಟಿ ನೀಡಿದ ಹಿನ್ನೆಲೆಯನ್ನು ಇಟ್ಟುಕೊಂಡೇ 'ಕಾಡ ಸೆರಗಿನ ಸೂಡಿ' ಎಂಬ ಕಾದಂಬರಿಯನ್ನು ಬರೆದ ನನಗೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಈ ಬರಹವನ್ನು ಬರೆಯಲು ಅವಕಾಶ ಸಿಕ್ಕಿದ್ದು ನನ್ನೂರಿನ ಇತಿಹಾಸ ಮತ್ತು ಸ್ವಾತಂತ್ರ್ಯದ ದಿನಗಳನ್ನು ಮತ್ತೊಮ್ಮೆ ಹಿಂದಿರುಗಿ ನೋಡಲು

ಮತ್ತು ಮರುಓದಿಗೆ ಅವಕಾಶ ಸಿಕ್ಕಿತು. ಇಂತಹ ಒಂದು ಅಪೂರ್ವ ಅವಕಾಶವನ್ನು ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ನನ್ನ ವಂದನೆ. ಸ್ವಾತಂತ್ರ್ಯ ದಕ್ಕಿದ ೭೫ನೇ ವರ್ಷದಲ್ಲಿ ೭೫ ಕೃತಿಗಳನ್ನು ಪ್ರಕಟಿಸುವ ಕಾರ್ಯಕ್ಕೆ ಮುಂದಾಗಿರುವ ಅಕಾಡೆಮಿ ನಿಜಕ್ಕೂ ಅಭಿನಂದನೆಗೆ ಅರ್ಹ.

'ಬಸರೂರು–ಕುಂದಾಪುರ ಸ್ವಾತಂತ್ರ್ಯ ಹೋರಾಟ'ದ ಕುರಿತು ಬರೆಯಲು ಹೊರಟವನಿಗೆ ಮಾರ್ಗದರ್ಶಿಯಾಗಿ ನಿಂತವರು ನನ್ನ ಗುರುಗಳಾದ ಕೋ.ಶಿವಾನಂದ ಕಾರಂತ್ ಮತ್ತು ಕುಂದಾಪುರದ ಹಿರಿಯ ಪತ್ರಕರ್ತ, 'ಕುಂದಪ್ರಭ' ಪತ್ರಿಕೆಯ ಸಂಪಾದಕ ಯು.ಎಸ್.ಶೆಣೈ. ಇಬ್ಬರಿಗೂ ನಾನು ಚಿರಋಣಿ. ಈ ಬರಹಕ್ಕೆ ಪೂರಕವಾದ ಕೃತಿಗಳನ್ನು ಒದಗಿಸುವಲ್ಲಿ ಸಹಾಯ ಮಾಡಿದ ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಗ್ರಂಥಪಾಲಕರಿಗೂ ಅಲ್ಲಿನ ಸಿಬ್ಬಂದಿಗೂ ನನ್ನ ವಂದನೆ ಸಲ್ಲುತ್ತದೆ.

ಇಂದು ನಾವು ಇಷ್ಟೊಂದು ಉಜ್ವಲವಾದ ದಿನಗಳನ್ನು ಕಾಣುತ್ತಿದ್ದೇವೆ ಎಂದರೆ ಅದಕ್ಕೆ ಅಂದಿನವರು ಪಟ್ಟ ಶ್ರಮ, ಅವರು ಹಾದುಬಂದ ಅಗ್ನಿಪರೀಕ್ಷೆಯೇ ಕಾರಣ. ಅವರು ಬಿತ್ತಿದ ಭವಿಷ್ಯದ ಬೀಜದ ಫಲವನ್ನು ನಾವು ಉಣ್ಣುತ್ತಿದ್ದೇವೆ. ನಮ್ಮ ಕಿರಿಯ ತಲೆಮಾರುಗಳು ಇದನ್ನು ಅರ್ಥ ಮಾಡಿಕೊಂಡರೆ ಅವರ ಶ್ರಮ ಸಾರ್ಥಕ, ಈ ಕಿರು ಹೊತ್ತಿಗೆಯೂ ಸಾರ್ಥಕ.

**– ಮಂಜುನಾಥ್ ಚಾಂದ್**
ಕುಂದಾಪುರ

## ಪರಿವಿಡಿ

| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಅಧ್ಯಾಯ–೧ | |
| ಸ್ವಾತಂತ್ರ್ಯ ಹೋರಾಟದಲ್ಲಿ ಬಸರೂರು–ಕುಂದಾಪುರ | ೧೫ |
| ಅಧ್ಯಾಯ–೨ | |
| ಆತ್ಮಶುದ್ಧೀಕರಣದ ಚಳವಳಿ ಕುಂದಾಪುರದಲ್ಲಿ ಗಾಂಧಿ | ೨೯ |
| ಅಧ್ಯಾಯ–೩ | |
| ಕುಂಡೆಗೆ ಬರೆ ಬಿದ್ದರೂ ತೆರಿಗೆ ಕಟ್ಟೆವು! | ೩೭ |
| ಅಧ್ಯಾಯ–೪ | |
| ಜನಜಾಗೃತಿಗೆ ಪ್ರೇರಕಶಕ್ತಿಯಾದ ಕೃಷ್ಣರಾಯ ಕೊಡ್ಗಿ | ೩೯ |
| ಅಧ್ಯಾಯ–೫ | |
| ನ್ಯಾಷನಲ್ ಆರ್ಮಿಯಲ್ಲಿ ಕ್ಯಾಪ್ಟನ್ ಆಗಿದ್ದ ಕಾಮತ್ | ೪೧ |
| ಅಧ್ಯಾಯ–೬ | |
| ಬದುಕಿದ್ದು ೨೬ ವರ್ಷ, ಹೋರಾಟ ಅಸದಳ! | ೪೪ |

ಅಧ್ಯಾಯ–೭
ಗಾಂಧಿ ಬೇಟಿಗೆ ಕರಾಚಿಗೆ ತೆರಳಿದ್ದ ರಾಮಣ್ಣ ಶೆಟ್ಟಿ ೪೭
ಅಧ್ಯಾಯ–೮
ಅನುಕ್ಷಣವೂ ದೇಶದ ಚಿಂತನೆಯ ವೀರ ವಿಠಲ ಪೈ ೪೯
ಅಧ್ಯಾಯ–೯
ಪ್ರತಿ ಹೋರಾಟದ ಸ್ನೇಹಸೇತು ಗೋಪಾಲಕೃಷ್ಣ ಪೈ ೫೩
ಅಧ್ಯಾಯ–೧೦
ಉಗ್ರ ಸೇನಾನಿ ಬಸ್ರೂರು ಸೂರಪ್ಪ ಶೆಟ್ಟಿ ೫೬
ಅಧ್ಯಾಯ–೧೧
ಸ್ವಾತಂತ್ರ್ಯ ಹೋರಾಟದ
ಮಮತಾಮಯಿ ಉಮಾಬಾಯಿ ಕುಂದಾಪುರ ೫೮
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೬

---

## ಅಧ್ಯಾಯ–೧
## ಸ್ವಾತಂತ್ರ್ಯ ಹೋರಾಟದಲ್ಲಿ ಬಸರೂರು–ಕುಂದಾಪುರ

**ಮಾತೃಭೂಮಿ ಜನನಿ ನಿನ್ನ ಸೇವೆ ಮಾಡುವೆ**
**ಪರಮ ಹರುಷದಿಂದ ನನ್ನ ಪ್ರಾಣ ನೀಡುವೆ**
**ಹಿಂದು ಮಾತೆ ಬಂಧು ಭಾವದಿಂದ ನಿನ್ನ ನಮಿಪೆವು**
**ಒಂದುಗೂಡಿ ಪಾರತಂತ್ರ್ಯದಿಂದ ನಿನ್ನ ಬಿಡಿಪೆವು**

ಕುಪ್ಪ ಕೊರಗ ಎಂಬಾತನ ಡೋಲನ್ನು ಸೂರಪ್ಪ ಶೆಟ್ಟರು ಲಯಬದ್ಧವಾಗಿ ಬಾರಿಸುತ್ತ ಹೊರಟಿದ್ದರೆ ಈ ಮೇಲಿನ ಹಾಡನ್ನು ಗಟ್ಟಿಧ್ವನಿಯಲ್ಲಿ ಹಾಡುತ್ತ ಸಾಗುತ್ತಿದ್ದವರು ಬಸರೂರು ಗೋಪಾಲಕೃಷ್ಣ ಶೆಣೈ ಅವರು. ಯಕ್ಷಗಾನ, ತಾಳಮದ್ದಳೆಯಿಂದ ಪ್ರಭಾವಿತರಾಗಿದ್ದ ಶೆಣೈ ಅವರು ಹಾಡುವುದರಲ್ಲಿ ಸಿದ್ಧಹಸ್ತರಾಗಿದ್ದರು. ಹಾಗಾಗಿ ಜನರನ್ನು ಪ್ರೇರೇಪಿಸುವಲ್ಲಿ ಅವರಿಗೆ ಹಾಡು ಬಹುಮುಖ್ಯ ಅಸ್ತ್ರವಾಗಿತ್ತು. ಕೊರಗನ ಡೋಲಿನ ಸದ್ದು ಮತ್ತು ಶೆಣೈ ಅವರ ಹಾಡು ಬಸರೂರು ಮತ್ತು ಕುಂದಾಪುರದ ಕೇರಿಕೇರಿಗಳಲ್ಲಿ ಮೇಳೈಸುತ್ತಿತ್ತು. ಪಾರತಂತ್ರ್ಯದಿಂದ ಮಾತೃಭೂಮಿಯನ್ನು ಬಂಧಮುಕ್ತವನ್ನಾಗಿ ಮಾಡುತ್ತೇವೆ ಎಂಬ ರಣಘೋಷ ಎಲ್ಲೆಲ್ಲೂ ಅನುರಣಿಸಿತ್ತು.

ನಮ್ಮ ಬಟ್ಟೆಗಳನ್ನು ನಾವೇ ನೇಯುವ ಕೆಲಸ ಮಾಡೋಣ, ಗಿರಣಿ ಬಟ್ಟೆಯನ್ನಲ್ಲ, ರಾಟೆಯಿಂದ ನೂತು ಮಾಡಿದ ನೂಲಿನ ಬಟ್ಟೆಯನ್ನೇ ಬಳಸೋಣ ಎಂಬ ಗಾಂಧೀಜಿಯವರ ಒಂದು ಸಂದೇಶ ಇವರೆಲ್ಲರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಹುಟ್ಟುಹಾಕಲು ಸಾಕಾಗಿತ್ತು. ಹೀಗೆ ಕುಂದಾಪುರದ ಭಾಗದಲ್ಲಿ ಶುರುವಾದ

‘ಚರಕ ಚಳವಳಿ’ಗೆ ಹೊಸ ಸಂಚಲನವನ್ನು ಕೊಟ್ಟವರ ಸಾಲಿನಲ್ಲಿ ಗೋಪಾಲಕೃಷ್ಣ ಶೆಣೈ ಮತ್ತು ಸೂರಪ್ಪ ಶೆಟ್ಟರು ಸೇರಿದಂತೆ ಅನೇಕರು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಹೋರಾಟದ ಸಾಗರದಲ್ಲಿ ಅವರ ಹಿಂದೆ ನಿಂತವರ ಸಾಲು ಕೂಡ ದೊಡ್ಡದೇ ಆಗಿತ್ತು.

**ಜಾತಿಮತ ಇಲ್ಲ**
**ನಾವೆಲ್ಲರೂ ಒಂದೇ**
**ನಮ್ಮ ಗುರಿ ಪೂರ್ಣ ಸ್ವರಾಜ್ಯ**

ಎಂಬ ಕೂಗು ‘ಚರಕ ಚಳವಳಿ’ಯನ್ನೂ ಮೀರಿದ್ದಾಗಿತ್ತು ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿರಲಿಲ್ಲ. ನಡೆದಾಡುವ ವಿಶ್ವಕೋಶವೆಂದೇ ಖ್ಯಾತರಾಗಿದ್ದ ಡಾ.ಶಿವರಾಮ ಕಾರಂತರು ಒಂದು ಲೇಖನದಲ್ಲಿ ಸೂರಪ್ಪ ಶೆಟ್ಟರ ಹೆಸರನ್ನು ಹೀಗೆ ಪ್ರಸ್ತಾಪ ಮಾಡುತ್ತಾರೆ:

“ರಾಟೆಯಿಂದ ನೂತು ಮಾಡಿದ ನೂಲಿನ ಬಟ್ಟೆಯನ್ನು ಬಳಸಬೇಕು, ಗಿರಣಿಯ ಅರಿವೆಯನ್ನಲ್ಲ ಎನ್ನುವ ಮೂಲಕ ಗಾಂಧಿ ಖಾದಿ ಉತ್ಪನ್ನವನ್ನು ಬೋಧಿಸಿದರು. ಆ ಕಾಲಕ್ಕೆ ನಾನು ಕುಂದಾಪುರದಲ್ಲಿದ್ದು ರಾಟೆ ಸಹಾಯದಿಂದ ನೂಲು ಮಾಡುವುದನ್ನು ಕಲಿಸುತ್ತಿದ್ದೆ. ಅದನ್ನು ನೇಯಲು ಕುಂದಾಪುರದಲ್ಲಿ ನೇಕಾರರಿಲಿಲ್ಲ. ಬಸರೂರಲ್ಲಿ ಆ ದಿನಗಳಲ್ಲೂ ಕೆಲವರು ಗುಳಿಮಗ್ಗದಲ್ಲಿ ಪಂಚೆ, ಸೀರೆ ನೇಯುತ್ತಿದ್ದರು. ಅದನ್ನು ಪಡೆಯಲು ಅನುಕೂಲ ಮಾಡಿಕೊಟ್ಟ ಗೆಳೆಯ ಸಂಕಯ್ಯ ಶೆಟ್ಟಿ ಎಂಬವರ ಮನೆಯ ಸೂರಪ್ಪ ಶೆಟ್ಟಿ. ಅವನ ನೆರವಿನಿಂದ ನಾನು ಸಂಗ್ರಹಿಸಿದ ನೂಲನ್ನು ಅರಿವೆ ಮಾಡಿಸಿ ತಂದು ಮಾರುತ್ತಿದ್ದೆ”

ಸ್ವಾತಂತ್ರ್ಯ ಸಂಗ್ರಾಮದ ತೊರೆಯಲ್ಲಿ ಚರಕ ಚಳವಳಿ ಎನ್ನುವುದು ಒಂದು ಬಿಂದು ಮಾತ್ರ. ಕರನಿರಾಕರಣೆ, ಶರಾಬು ಅಂಗಡಿ ವಿರುದ್ಧ ಪಿಕೆಟಿಂಗ್, ವಿದೇಶಿ ವಸ್ತ್ರ ಬಹಿಷ್ಕಾರ, ಉಪ್ಪಿನ ಸತ್ಯಾಗ್ರಹ ಹೀಗೆ ಅನೇಕ ರೂಪಗಳಲ್ಲಿ ಜನ ಬ್ರಿಟಿಷರ ವಿರುದ್ಧ ತಿರುಗಿಬಿದ್ದಿದ್ದರು. ಕುಂದಾಪುರ ಮತ್ತು ಬಸರೂರಿನ ಸುತ್ತಮುತ್ತ ಇದ್ದ ಅನೇಕ ನಾಯಕರು ಜನರನ್ನು ಬಡಿದೆಬ್ಬಿಸುವಲ್ಲಿ ಹಗಲಿರುಳೆನ್ನದೇ ಶ್ರಮಿಸುತ್ತಿದ್ದರು. ಇದಕ್ಕಾಗಿ ಅವರು ನಡೆಸುತ್ತಿದ್ದ ಪ್ರಭಾತ ಫೇರಿಗಳು ಸಾಗದೇ ಇದ್ದ ಬೀದಿಗಳೇ ಇರಲಿಲ್ಲ. ಒಂದಲ್ಲ ಒಂದು ರೀತಿಯಲ್ಲಿ ಜನರನ್ನು



ಚಳವಳಿಯಲ್ಲಿ, ಸತ್ಯಾಗ್ರಹಗಳಲ್ಲಿ ತೊಡಗಿಸಿಕೊಳ್ಳಲು ಅವರು ಪ್ರೇರಣೆಯನ್ನು ನೀಡುತ್ತಿದ್ದರು.

## ದೇಗುಲಗಳ ಪಟ್ಟಣದಲ್ಲಿ...

ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ ಹೆಚ್ಚಿನ ಮಹತ್ವವಿದ್ದುದು ಕುಂದಾಪುರಕ್ಕಿಂತ ಬಸರೂರಿಗೇ ಎಂಬುದು ಅರಿವಾಗುತ್ತದೆ. ಕೆಳದಿ ಸಾಮ್ರಾಜ್ಯದ ಕುರುಹುಗಳು ಕಾಣಿಸುವ ಬಸರೂರು ಅಕ್ಷರಶಃ ದೇಗುಲಗಳ ಪಟ್ಟಣವಾಗಿತ್ತು. ಹಲವಾರು ಜೈನ ದೇಗುಲಗಳು ಇಲ್ಲಿ ಇದ್ದವು ಎಂಬುದಕ್ಕೆ ಅನೇಕ ಪುರಾವೆಗಳು ಸಿಗುತ್ತವೆ. ಅಲ್ಲಿನ ಪ್ರಾಕೃತಿಕ ಸೌಂದರ್ಯ, ನದಿ, ಕೋಟೆಗಳು, ಗಲ್ಲಿಗೊಂದರಂತೆ ಇದ್ದ ದೇಗುಲಗಳಿಂದಾಗಿ ಇದನ್ನು ಎರಡನೇ ಕಾಶಿ ಎಂದು ಕರೆಯಲು ಯೋಗ್ಯವಾಗಿತ್ತು. ಈ ಪಟ್ಟಣದಲ್ಲಿ ಏಳು ಕೇರಿ ಮತ್ತು ಏಳು ಕೆರೆಗಳಿದ್ದವು. ಪ್ರತಿಯೊಂದು ಕೇರಿಗೂ ಪ್ರತ್ಯೇಕವಾದ ಆರಾಧ್ಯ ದೇವರಿದ್ದರು. ಬಸರೂರು ಮತ್ತು ಹಟ್ಟಿಯಂಗಡಿ ಕ್ರಿಸ್ತ ಶಕೆಯ ಆರಂಭದಲ್ಲಿಯೇ ಪ್ರಸಿದ್ಧ ಕೇಂದ್ರಗಳಾಗಿದ್ದವು. ಹಿಂದೆ ಬಸು ಚಕ್ರವರ್ತಿ ಎಂಬವನು ಇದನ್ನು ರಾಜಧಾನಿ ಮಾಡಿಕೊಂಡಿದ್ದು ಇಲ್ಲಿ ಅನೇಕ ದೇವಸ್ಥಾನಗಳ ಸ್ಥಾಪನೆಗೆ ಕಾರಣನಾದ ಎಂಬ ಪ್ರತೀತಿ ಇದೆ. ಕ್ರಿ.ಶ. ೫ ಮತ್ತು ೬ನೇ ಶತಮಾನದಲ್ಲಿ ಬೌದ್ಧ ಧರ್ಮವೂ ಇಲ್ಲಿ ನೆಲೆ ಕಂಡಿತ್ತು ಎನ್ನಲಾಗುತ್ತದೆ. ವಸು ಚಕ್ರವರ್ತಿ ಎಂಬ ಅರಸನಿಂದ ಈ ಊರು ‘ವಸುಪುರ’ ಎಂಬ ಅಭಿದಾನವನ್ನು ಪಡೆಯಿತು ಎಂಬ ಬಗ್ಗೆ ಕೆಲವು ಪ್ರಸ್ತಾಪಗಳು ಕಂಡುಬರುತ್ತವಾದರೂ ಅದನ್ನು ಪುಷ್ಟೀಕರಿಸುವ ಶಾಸನಗಳೇನೂ ಲಭ್ಯವಾಗಿಲ್ಲ. ಆದರೆ, ‘ಬಸರೂರು’ ಎಂಬ ಉಲ್ಲೇಖ ಆರೇಳು ಶತಮಾನಗಳಿಂದಲೂ ಬಳಕೆಯಲ್ಲಿ ಇದ್ದುದು ದಾಖಲೆಯಿಂದ ತಿಳಿದುಬರುತ್ತದೆ. ಬಸರೂರು ಸಂಸ್ಕೃತಿಸಲ್ಪಟ್ಟು ‘ವಸುಪುರ’ ಎಂಬ ರೂಪಾಂತರವಾಗಿರುವ ವಾದವನ್ನೂ ಮಂಡಿಸಲಾಗುತ್ತದೆ. ಲಿಂಗಣ್ಣ ಬರೆದಿರುವ ಕೆಳದಿ ನೃಪ ವಿಜಯದಲ್ಲಿ ಮಾತ್ರ ‘ವಸುಪುರ’ದ ಉಲ್ಲೇಖವಿದೆ.

ಇತ್ತ ಕುಂದಾಪುರಕ್ಕೆ ಬಂದರೆ, ಕುಂದವರ್ಮನೆಂಬ ಅರಸ ಪಂಚಗಂಗಾವಳಿಯ ಬಳಿ ಕಟ್ಟಿಸಿದ ಕುಂದೇಶ್ವರ ದೇವಸ್ಥಾನದಿಂದಾಗಿ ಈ ಊರಿಗೆ ‘ಕುಂದಾ–ಪುರ’ ಎಂಬ ಹೆಸರು ಬಂತೆಂಬ ಪ್ರತೀತಿ ಇದೆ. ಈ

ದೇಗುಲದಲ್ಲಿ ಆಳುಪರ ಕಾಲದ ಶಿಲಾಶಾಸನಗಳಿವೆ. ಪೋರ್ಚುಗೀಸರು ಇಲ್ಲಿ ಕೋಟೆಯನ್ನು ಕಟ್ಟಿಸಿದ್ದರು. ಟಿಪ್ಪುವಿನ ಕಾಲದಲ್ಲಿ ಗಂಗೊಳ್ಳಿ ಹಡಗು ಕಟ್ಟುವ ಪ್ರಮುಖ ರೇವಾಗಿತ್ತು. ಟಿಪ್ಪುವನ್ನು ಸೋಲಿಸಲು ಮುಂಬೈಯಿಂದ ಕಳುಹಿಸಲಾದ ಇಂಗ್ಲಿಷ್ ಸೈನ್ಯವು ಕುಂದಾಪುರದಲ್ಲಿಳಿದು, ಅಲ್ಲಿಂದ ೪೫ ಕಿ.ಮೀ. ದೂರದ ಹೊಸಂಗಡಿ ದಾರಿಯಾಗಿ ಬಿದನೂರಿಗೆ ಸಾಗಿತ್ತು ಎಂಬ ಉಲ್ಲೇಖ ಸಿಗುತ್ತದೆ.

ಕುಂದಾಪುರ ಸುತ್ತಮುತ್ತಲಿನ ಪ್ರದೇಶವು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿದ್ದರೂ ಕೂಡ ಕೆಲವು ಪ್ರದೇಶಗಳಲ್ಲಿ ಸ್ಥಳೀಯ ವಂಶಪರಂಪರೆಯಲ್ಲಿ ಅರಸರ ಆಡಳಿತವಿತ್ತು. ತ್ರಾಸಿಯಿಂದ ಉತ್ತರಕ್ಕೆ ಇರುವ ಪ್ರದೇಶ ಗೇರುಸೊಪ್ಪೆಯಲ್ಲಿ ಸಾಳ್ವ ವಂಶದ ರಾಣಿ ಚೆನ್ನಭೈರಾದೇವಿ ಅಧಿಕಾರ ನಡೆಸುತ್ತಿದ್ದಳು. ತಾಲೂಕಿನ ಹೊಸಂಗಡಿ, ಬಗ್ಗವಾಡಿ ಮತ್ತು ಕೊಲ್ಲೂರಿನಲ್ಲಿ ಹೊನ್ನೆಕಂಬಳಿ ಅರಸರ ಆಡಳಿತವಿತ್ತು. ಗಂಗೊಳ್ಳಿಯನ್ನು ವ್ಯಾಪಾರ ಕೇಂದ್ರವನ್ನಾಗಿ ಮಾಡಿಕೊಂಡು ಅಲ್ಲಿ ಒಂದು ಕೋಟೆಯನ್ನು ಕಟ್ಟಿಕೊಂಡಿದ್ದರು ಎಂಬ ಪ್ರಸ್ತಾಪವನ್ನು ಪೋರ್ಚುಗೀಸ್ ಇತಿಹಾಸಕಾರ ಪೆರಿಯಾ ಸೋಜ ತನ್ನ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾನೆ.

ಕ್ರಿ.ಶ. ೧೫೫೪ರಲ್ಲಿ ಬಸರೂರಿನಲ್ಲಿ ಕೆಳದಿ ನಾಯಕರ ಆಡಳಿತ ಆರಂಭವಾಯಿತು ಎಂಬ ಉಲ್ಲೇಖವು ಬಸರೂರು, ಶಂಕರನಾರಾಯಣ, ಕುಂಭಾಸಿ, ಕೋಟೇಶ್ವರ ಹಾಗೂ ಕೊಲ್ಲೂರು ದೇಗುಲಗಳಲ್ಲಿ ಲಭ್ಯವಾದ ಶಾಸನಗಳಲ್ಲಿ ಕಾಣಸಿಗುತ್ತದೆ. ಆದರೆ, ಪೋರ್ಚುಗೀಸರು ಮಾತ್ರ ಯಾವತ್ತೂ ಈ ಪ್ರದೇಶದ ಮೇಲೆ ಕಣ್ಣಿಟ್ಟುಕೊಂಡೇ ಇದ್ದರು. ಕ್ರಿ.ಶ. ೧೬೩೦ರಲ್ಲಿ ಕೆಳದಿಯ ವೆಂಕಟಪ್ಪ ನಿಧನವಾದ ತಕ್ಷಣ ಉಂಟಾದ ಗೊಂದಲದ ಲಾಭವನ್ನು ಪಡೆದ ಅವರು ಗಂಗೊಳ್ಳಿಯನ್ನು ವಶಕ್ಕೆ ತೆಗೆದುಕೊಂಡರು. ಇಲ್ಲಿದ್ದ ಸಮುದ್ರ ತೀರ, ಪಂಚಗಂಗಾವಳಿ ನದಿಯ ಮೂಲಕ ಕೊಲ್ಲೂರು ಹೊಳೆ, ಬಸ್ರೂರು ತನಕವೂ ತಮ್ಮ ವ್ಯಾಪಾರವನ್ನು ವಿಸ್ತರಿಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಅವರದಾಗಿತ್ತು. ಹಾಗಾಗಿ ಇಲ್ಲೊಂದು ಕೋಟೆಯನ್ನು ಕಟ್ಟಿ ಗಂಗೊಳ್ಳಿಯನ್ನು ದ್ವೀಪವನ್ನಾಗಿ ಮಾಡಿಕೊಂಡು ವ್ಯಾಪಾರ ನಡೆಸುವ ಕುತಂತ್ರಕ್ಕೆ ದೊಡ್ಡ ಪೆಟ್ಟು ಬಿದ್ದಿದ್ದು ಪ್ರಕೃತಿ ವಿಕೋಪದಿಂದ. ದಾಖಲೆಗಳ ಪ್ರಕಾರ ಕ್ರಿ.ಶ. ೧೬೫೨ರ ಮೇ



ತಿಂಗಳಿನಲ್ಲಿ ಗಂಗೊಳ್ಳಿ ಸಮೀಪ ಭೀಕರ ಬಿರುಗಾಳಿ ಎದ್ದು ಪೋರ್ಚುಗೀಸರ ಹಡಗುಗಳು ನಾಶವಾಗಿ ಹೋದವು. ೧೪೦ಕ್ಕೂ ಅಧಿಕ ಪೋರ್ಚುಗೀಸ್ ಹಡಗುಗಳು ಗಂಗೊಳ್ಳಿ ಮತ್ತು ಬಸರೂರು ನಡುವೆ ತಳ ಸೇರಿದವು. ಅಪಾರ ಪ್ರಮಾಣದ ನಷ್ಟ ಅನುಭವಿಸಬೇಕಾಯಿತು. ಇದರಿಂದ ಹೈರಾಣಾದ ಪೋರ್ಚುಗೀಸರು ಕ್ರೈಸ್ತರನ್ನು ಕರೆತಂದು ಕೋಟೆಯ ರಕ್ಷಣೆಗೆ ಬಿಟ್ಟರು ಎನ್ನುತ್ತವೆ ದಾಖಲೆಗಳು.

ಯಾವತ್ತೂ ಸುಲಿಗೆ–ದರೋಡೆ ರೀತಿಯ ವ್ಯಾಪಾರಿ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದ ಪೋರ್ಚುಗೀಸರನ್ನು ಬಗ್ಗುಬಡಿಯುವ ಕೆಲಸ ಮಾಡಿದವನು ಕ್ರಿ.ಶ. ೧೬೫೩ರಲ್ಲಿ ಅಧಿಕಾರಕ್ಕೆ ಬಂದ ಶಿವಪ್ಪ ನಾಯಕ. ಆತ ಬಸರೂರು ಮತ್ತು ಗಂಗೊಳ್ಳಿಯಲ್ಲಿ ವಿದೇಶಿ ಶಕ್ತಿಯನ್ನು ದಿಟ್ಟವಾಗಿ ಎದುರಿಸಿದ ಎನ್ನುವ ಉಲ್ಲೇಖವಿದೆ. ಕ್ರಿ.ಶ. ೧೬೬೫ರ ಫೆಬ್ರುವರಿ ಎಂಟರಂದು ಶಿವಾಜಿ ಬಸರೂರಿನ ಮೇಲೆ ನೌಕಾ ದಾಳಿ ಮಾಡಿ ಅಪಾರ ಸಂಪತ್ತನ್ನು ದೋಚಿಕೊಂಡು ಹೋದ ಎಂಬ ಪ್ರಸ್ತಾಪ ಕೂಡ ಬರುತ್ತದೆ. ಆತನ ಮುಖ್ಯ ಉದ್ದೇಶ ಇದ್ದುದು ಡಚ್ಚರು ಹಾಗೂ ಪೋರ್ಚುಗೀಸರನ್ನು ಮಟ್ಟಹಾಕುವುದಾಗಿತ್ತು. ಈ ಬಂದರಿನ ಮೇಲೆ ಪೋರ್ಚುಗೀಸರು ಹಾಗೂ ಡಚ್ಚರು ಹೊಂದಿದ್ದ ಪ್ರಾಬಲ್ಯವನ್ನು ಮುರಿಯಬೇಕು ಎನ್ನುವ ಉದ್ದೇಶದಿಂದಲೇ ಶಿವಾಜಿ ಈ ಫಿರಂಗಿ ದಾಳಿ ಮಾಡಿದ. ಅದು ಆತನ ರಾಜಕೀಯ ಮುತ್ಸದ್ದಿತನಕ್ಕೆ ಸಾಕ್ಷಿಯಾಗಿತ್ತು ಎಂದು ಬಣ್ಣಿಸಲಾಗುತ್ತದೆ. ಇಷ್ಟಾಗಿಯೂ ಆಸೆಬುರುಕ ಪೋರ್ಚುಗೀಸರ ಹಡಗು ಬಸರೂರು ಕಡೆಗೆ ಬರುವುದು ನಿಲ್ಲಲಿಲ್ಲ. ಯಾಕೆಂದರೆ ಬಸರೂರಿನಲ್ಲಿ ಸಿಗುತ್ತಿದ್ದ ಅಕ್ಕಿಗೆ ಮಸ್ಕತ್, ಮಾಲ್ಡೀವ್ಸ್, ಅರಬ್ ರಾಷ್ಟ್ರಗಳಲ್ಲಿ ಭಾರೀ ಬೇಡಿಕೆ ಇತ್ತು. ಅಕ್ಕಿಯನ್ನು ಮಸ್ಕತ್ತಿಗೆ ಕೊಟ್ಟು ಅಲ್ಲಿಂದ ಖರ್ಜೂರ, ಮುತ್ತು, ಹರಳು ಮತ್ತು ಕುದುರೆಯನ್ನು ತರುತ್ತಿದ್ದರು. ಹಾಗಾಗಿ ನಂತರದ ಕಾಲಮಾನಗಳಲ್ಲಿ ಬಂದ ಕೆಳದಿ ಅರಸರ ಜೊತೆ ಅವರು ಅನೇಕ ರೀತಿಯಲ್ಲಿ ಒಪ್ಪಂದವನ್ನು ಮಾಡಿಕೊಂಡರು. ಶತಾಯಗತಾಯ ವ್ಯಾಪಾರವನ್ನು ಕುದುರಿಸುವಲ್ಲಿ ಸಫಲರಾಗುತ್ತಿದ್ದರು. ೧೭೩೯ರಲ್ಲಿ ಎರಡನೇ ಬಸಪ್ಪ ನಾಯಕನು ಕುಂದಾಪುರದಲ್ಲಿ ಬಂದರನ್ನು ನಿರ್ಮಿಸಿದ. ಇಂದಿಗೂ ಇದು ಕುಂದಾಪುರದಲ್ಲಿ 'ಕೋಟೆ ಬಾಗಿಲು' ರೂಪದಲ್ಲಿದೆ.

ಇಷ್ಟೆಲ್ಲವನ್ನೂ ಯಾಕೆ ಪ್ರಸ್ತಾಪ ಮಾಡಬೇಕಾಯಿತೆಂದರೆ, ಸಮೃದ್ಧವಾದ ವಾಣಿಜ್ಯ ಕೇಂದ್ರ ಎಂಬ ಕಾರಣದಿಂದ ಬಸರೂರನ್ನು ಅನೇಕರು ತಮ್ಮ 'ಕೋಟೆ'ಯನ್ನಾಗಿ ಮಾಡಿಕೊಂಡರು. ೧೨ನೇ ಶತಮಾನದಲ್ಲಿಯೇ ಇದು 'ಹೊಸ ರೇವು ಪಟ್ಟಣ' ಎಂಬ ಖ್ಯಾತಿಗೆ ಒಳಗಾಗಿತ್ತು. ಸಾಕಷ್ಟು ಅಗಲವಾದ ಅಳಿವೆ ಬಾಗಿಲು ಇದ್ದುದು ಅನುಕೂಲವಾಗಿತ್ತು. ಸರಕುಗಳನ್ನು ತುಂಬಿಕೊಂಡು ಬಂದು ಲಂಗರು ಹಾಕುತ್ತಿದ್ದ ಹಡಗುಗಳು ಬಸರೂರು ಬಂದರನ್ನು ಆಕರ್ಷಣೆಯ ಕೇಂದ್ರವಾಗಿ ಮಾಡಿದವು. ಕರಿಮೆಣಸು, ತೆಂಗಿನಕಾಯಿ, ಅಕ್ಕಿ, ಕೊಬ್ಬರಿ, ತೆಂಗಿನ ನಾರು ಹಾಗೂ ಕಬ್ಬಿಣದ ಅದಿರುಗಳ ವ್ಯಾಪಾರ ಜೋರಾಗಿಯೇ ಇತ್ತು. ಅದರ ಲಾಭ ಪಡೆದುಕೊಳ್ಳಲು ಎಲ್ಲರೂ ಹಾತೊರೆಯುತ್ತಿದ್ದರು. ಇದರಲ್ಲಿ ವಿದೇಶಿ ಶಕ್ತಿಗಳೂ ಇದ್ದವು. ಈ ಕಾರಣದಿಂದ ಬಸರೂರು ಅನೇಕ ಸಂಘರ್ಷಗಳಿಗೆ ಸಾಕ್ಷಿಯಾಗಿದ್ದೂ ಹೌದು.

ಸ್ವಾತಂತ್ರ್ಯ ಪೂರ್ವದ ಕೊನೆಯ ಕಾಲಮಾನವನ್ನು ಗಮನಿಸಿದರೆ, ಇಲ್ಲೊಂದು ಸಾಮ್ರಾಜ್ಯವನ್ನು ಕಟ್ಟುವ ಉದ್ದೇಶದೊಂದಿಗೆ ಬಂದ ಪೋರ್ಚುಗೀಸರಿಗೆ ಅದು ಕೈಗೂಡಲಿಲ್ಲ. ಅವರ ಕನಸುಗಳನ್ನು ಹೊಸಕಿ ಹಾಕಲೆಂದೇ ಬ್ರಿಟಿಷರು ಬಂದರು. ಕ್ರಿ.ಶ. ೧೭೯೯ರಲ್ಲಿ ಬಸರೂರು ಬಂದರಿನಲ್ಲಿ ಅವರು ಲಂಗರು ಹಾಕಿದಾಗ ದಕ್ಷಿಣ ಕನ್ನಡ ಜಿಲ್ಲೆ ಮದ್ರಾಸ್ ಪ್ರಾಂತ್ಯದ ವ್ಯಾಪ್ತಿಗೆ ಸೇರಿತ್ತು. ಆಗ ಮೊದಲ ಕಲೆಕ್ಟರ್ ಆಗಿ ಬಂದವನು ಸರ್ ಥಾಮಸ್ ಮನ್ರೋ. ಕಂದಾಯ ವಸೂಲಿ ಮಾಡುತ್ತ ಬ್ರಿಟಿಷ್ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಮನ್ರೋ ಬಸರೂರಿನಲ್ಲಿ ಬಂಗಲೆಯನ್ನೂ ಕಟ್ಟಿಕೊಂಡಿದ್ದ.

## ವಿಭಜನೆಯ 'ದಾರಿ'– ಶಿಥಿಲಗೊಂಡ ರೇವು

ಉದ್ದಾನುದ್ದಕ್ಕೆ ಕರಾವಳಿ ತೀರ ಎಂದು ಕರೆಸಿಕೊಂಡಿದ್ದ ಪ್ರದೇಶವು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಎಂದು ಭೌಗೋಳಿಕವಾಗಿ ವಿಭಜನೆಯನ್ನು ಹೊಂದಿದ್ದು ೧೮೬೨ರಲ್ಲಿ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ತುತ್ತತುದಿಯ ಭಾಗವಾಗಿದ್ದು ಕುಂದಾಪುರ. ಅಲ್ಲಿಯ ತನಕ ಅದು ಬಸರೂರಿನ ಒಂದು ಭಾಗವೇ ಆಗಿದ್ದು ಕೆಳ ಬಸರೂರು ಎಂದು ಕರೆಸಿಕೊಳ್ಳುತ್ತಿತ್ತು. ಈ ಭಾಗದಲ್ಲಿ ಹಾದುಹೋದ ಕರಾವಳಿ ರಸ್ತೆ ಬಸರೂರನ್ನು ಅಕ್ಷರಶಃ ಮೂಲೆಗುಂಪು ಮಾಡಿತು. ಇನ್ನೊಂದು ಕಡೆ ಪ್ರಾಕೃತಿಕವಾದ ತೊಂದರೆಗಳು ಎದುರಾಗಿ ಮಚ್ವೆಗಳು (ಸಣ್ಣ ಹಡಗು) ಅಲ್ಲಿಗೆ ಹೋಗುವುದು ಸಾಧ್ಯವಾಗಲಿಲ್ಲ. ಇಲ್ಲಿ ಆಳಿದ ಅರಸರು, ಆಳಲು ಬಂದ ವಿದೇಶಿಗರು ವ್ಯಾಪಾರದ ಮೇಲೆ ಕಣ್ಣಿಟ್ಟರೇ ಹೊರತು ಪ್ರಾಕೃತಿಕ ತೊಂದರೆಗಳನ್ನು ನಿವಾರಿಸುವ ಕಡೆಗೆ ಗಮನ ಹರಿಸಲೇ ಇಲ್ಲ. ಇಲ್ಲಿ ಹರಿಯುತ್ತಿದ್ದ ನದಿ ಮತ್ತು ಸಮುದ್ರ ರೇವಿಗೆ ಅಪಾಯಕಾರಿಯಾಗಿತ್ತು. ರೇವು ಶಿಥಿಲಗೊಳ್ಳುತ್ತಿದೆ, ಅದು ನಿಮ್ಮೆಲ್ಲರ ವ್ಯಾಪಾರಕ್ಕೆ ಕಂಟಕಪ್ರಾಯವಾಗಲಿದೆ ಎಂದು ಪೋರ್ಚುಗೀಸ್ ನಕಾಶಕಾರರು ಎಚ್ಚರಿಕೆಯನ್ನು ಕೊಟ್ಟರೂ ಅದನ್ನು ಯಾರೂ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ನದಿಯಲ್ಲಿ ಕೆಲವು ಕಡೆ ಹೂಳು ತುಂಬಿ ಕುದುರುಗಳು ಬೆಳೆದವು. ಇದರಿಂದ ಮಚ್ವೆಗಳು ಬರುವುದಕ್ಕೆ ಅಡಚಣೆಯಾಯಿತು. ಇಲ್ಲಿ ಲಂಗರು ಹಾಕುವುದು ಕೂಡ ಕಷ್ಟವಾಗುತ್ತಿತ್ತು. ಕ್ರಿ.ಶ. ೧೬೪೦ರ ಸುಮಾರಿಗೆ ಬಸರೂರು, ಆನಗಳ್ಳಿ, ಬರೆಗುಂಡಿ ನದಿ ಉಕ್ಕಿ ಹರಿದು ನಷ್ಟ ಸಂಭವಿಸಿತು ಎಂಬ ಉಲ್ಲೇಖಗಳಿವೆ. ಹೀಗೆ ನದಿ ಉಕ್ಕಿ ಹರಿದಾಗ ಬಸರೂರು ಕೋಟೆ ಮತ್ತು ಬಂದರಿಗೆ ಹಾನಿ ಸಂಭವಿಸಿ ಕ್ರಮೇಣ ನಾಶವಾಯಿತು ಎಂದು ೧೬೫೦ರ ಪೋರ್ಚುಗೀಸ್ ದಾಖಲೆಗಳು ಹೇಳುತ್ತವೆ. ವಾಣಿಜ್ಯ ನಗರಿ ಬಸರೂರಿಗೆ ಇವೆಲ್ಲವೂ ಹಿನ್ನಡೆಯಾಗಿ ಅಲ್ಲಿನ ವ್ಯಾಪಾರದ ಚಟುವಟಿಕೆಗಳು ಕ್ಷೀಣಿಸಿದವು. ಬಸರೂರು ಬಂದರಿನಲ್ಲಿ ಕುಳಿತಿದ್ದ ಬ್ರಿಟಿಷರ ತಿಜೋರಿ ತುಂಬುವುದು ಕಷ್ಟವಾಯಿತು. ಅವರ ಆಡಳಿತದ ಹಡಗು ಮುಳುಗತೊಡಗಿತ್ತು. ಇದೇ ಹೊತ್ತಿಗೆ ರಸ್ತೆ ಸಂಪರ್ಕ ಸೇರಿದಂತೆ ಇತರ ಮೂಲಭೂತ ಸೌಕರ್ಯಗಳನ್ನು ಪಡೆದುಕೊಂಡ ಕುಂದಾಪುರ ಅಭಿವೃದ್ಧಿಯ ಕಡೆಗೆ ಮುಖಮಾಡಿತ್ತು.

ಈ ಹೊತ್ತಿನಲ್ಲಿ ಬ್ರಿಟಿಷರ ವಿರುದ್ಧದ ಹೋರಾಟ, ಚಳವಳಿ ತಾರಕ ಸ್ವರೂಪವನ್ನು ಪಡೆದಿತ್ತು. ಅದರಲ್ಲಿ ಬಹುತೇಕರು ಬಸರೂರು ಭಾಗದವರೇ ಇದ್ದರೂ ಕೂಡ ಸ್ವಾತಂತ್ರ್ಯ ಚಳವಳಿಗೆ ಕೇಂದ್ರಸ್ಥಾನವಾಗಿದ್ದು ಕುಂದಾಪುರ. ಆನಗಳ್ಳಿ, ಹಟ್ಟಿಕುದ್ರು, ಉಪ್ಪಿನಕುದ್ರು, ಕಂದಾವರ, ಮಾಗಣೆ, ಬಳ್ಕೂರು, ಜಪ್ತಿ ಮುಂತಾದ ಗ್ರಾಮಗಳಲ್ಲಿ ಕಂದಾಯ ವಸೂಲಿ, ನ್ಯಾಯ ತೀರ್ಮಾನ, ಜನನ–ಮರಣ ನೋಂದಣಿ ಹೀಗೆ ಅನೇಕ ಆಡಳಿತಾತ್ಮಕ ಕೆಲಸಗಳನ್ನು ಮಾಡುತ್ತ ಜನಸಾಮಾನ್ಯರ ಜೊತೆ ಬೆರೆತುಹೋಗಿದ್ದ ಪಟೇಲರು, ಶಾನುಭೋಗರೆಲ್ಲ

ಬ್ರಿಟಿಷರ ವಿರುದ್ಧ ಸೆಟೆದು ನಿಂತರು. ಅವರ ಒಂದು ಕರೆಗೆ ಜನರಿಂದ ದೊಡ್ಡಮಟ್ಟದಲ್ಲಿ ಬೆಂಬಲ ದೊರಕಿತು. ಹಾಗಾಗಿ ಕುಂದಾಪುರವನ್ನು ಕೇಂದ್ರಸ್ಥಾನವನ್ನಾಗಿ ಹೊಂದಿದ ಸ್ವಾತಂತ್ರ್ಯ ಚಳವಳಿ ೧೯೨೦ರ ಬಳಿಕ ತೀವ್ರ ಸ್ವರೂಪವನ್ನು ಪಡೆದುಕೊಳ್ಳಲು ಕಷ್ಟವಾಗಲಿಲ್ಲ.

## ಸಾಮಾಜಿಕ ಪರಿವರ್ತನೆಗೆ ಆಕರ್ಷಿತರಾಗಿದ್ದ ಗಾಂಧಿ

ಇದಕ್ಕೆ ಮುಖ್ಯ ಇನ್ನೊಂದು ಕಾರಣವೂ ಇತ್ತು. ೧೯೨೦ರಲ್ಲಿ ಗಾಂಧೀಜಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಮೊದಲ ಬಾರಿಗೆ ಪಾದಸ್ಪರ್ಶ ಮಾಡಿದ್ದರು. ಅವರು ಇಲ್ಲಿಗೆ ಭೇಟಿ ನೀಡುವುದಕ್ಕೆ ಇದ್ದ ಬಹುಮುಖ್ಯ ಕಾರಣವನ್ನು ಇಲ್ಲಿ ಗಮನಿಸಬೇಕು. ಅದೇನೆಂದರೆ ಈ ಜಿಲ್ಲೆಯಲ್ಲಿ ನಡೆಯುತ್ತಿದ್ದ ಸಾಮಾಜಿಕ ಪರಿವರ್ತನೆ ಕೆಲಸಗಳು ಅವರನ್ನು ಸೆಳೆದಿತ್ತು. ಈ ದೇಶದಲ್ಲಿ ಅಸ್ಪೃಶ್ಯತೆ ನಿವಾರಣೆಯಾಗಬೇಕು ಮತ್ತು ಅಸ್ಪೃಶ್ಯರ ಉದ್ಧಾರ ಆಗಬೇಕು ಎಂದು ಗಾಂಧಿ ಯಾವತ್ತು ಯೋಚನೆ ಮಾಡಿದ್ದರೋ ಅದಕ್ಕಿಂತ ಸಾಕಷ್ಟು ಮೊದಲೇ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಹುದೊಂದು ಸಾಮಾಜಿಕ ಪರಿವರ್ತನೆ ಕಾರ್ಯ ಆರಂಭವಾಗಿಹೋಗಿತ್ತು. ಇಲ್ಲಿನ ಸಾಮಾಜಿಕ ಸ್ಥಿತಿಯನ್ನು, ಭೌಗೋಳಿಕ ಚಿತ್ರಣವನ್ನು ಬಲ್ಲವರಾಗಿದ್ದ ಕುದ್ಮುಲ್ ರಂಗರಾಯರು ಹರಿಜನೋದ್ಧಾರ ಮತ್ತು ಮಹಿಳಾ ಸಬಲೀಕರಣವನ್ನು ಅಕ್ಷರಶಃ ಜಾರಿಗೆ ತಂದುಬಿಟ್ಟಿದ್ದರು. ನಿಜಕ್ಕೂ ಅದೊಂದು ಮೌನಕ್ರಾಂತಿಯೇ ಆಗಿತ್ತು. ಮಂಗಳೂರಿನಲ್ಲಿ ರಂಗರಾಯರು ಹರಿಜನಶಾಲೆಯನ್ನೇ ನಡೆಸುತ್ತಿದ್ದರು. ತಮ್ಮದೇ ಆದ ಇಂತಹ ಆಶಯಗಳು ಇಲ್ಲಿ ಮೊದಲೇ ಜಾರಿಗೆ ಬಂದಿದ್ದರಿಂದ ಗಾಂಧೀಜಿ ನಿಜಕ್ಕೂ ಪುಳಕಿತರಾಗಿದ್ದರು. ಈ ಕಾರಣದಿಂದಾಗಿ ಜಿಲ್ಲೆಗೆ ಆಗಮಿಸಿದ ಗಾಂಧಿ ಇಲ್ಲಿನ ಕಾರ್ನಾಡ್ ಸದಾಶಿವ ರಾಯರಂತಹ ಹಿರಿಯ ನಾಯಕರೊಂದಿಗೆ ಹರಿಜನ ಕೇರಿಗಳಿಗೆ ಭೇಟಿ ಕೊಟ್ಟಿದ್ದರು. ಅಲ್ಲಿನ ಸಾಮಾಜಿಕ ಪರಿವರ್ತನೆಯನ್ನು ಕಣ್ಣಾರೆ ಕಂಡಿದ್ದರು.

ಈ ಹಿನ್ನೆಲೆಯಲ್ಲಿ ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಜನರಲ್ಲಿ ರಾಜಕೀಯ ಪ್ರಜ್ಞೆ, ಎಲ್ಲಕ್ಕಿಂತ ಮುಖ್ಯವಾಗಿ ರಾಷ್ಟ್ರೀಯ ಪ್ರಜ್ಞೆ ಸಾಕಷ್ಟು ಮೊದಲೇ ಬೆಳೆದಿತ್ತು ಎಂಬುದು ಗಮನಾರ್ಹ. ಶ್ರೀಮಂತರು ಬಡವರೊಂದಿಗೆ ಹಂಚಿ ತಿನ್ನುವ, ಜಾತಿ–ಧರ್ಮದ ಹಂಗಿಲ್ಲದೇ ಮಾನವಕುಲ ಒಂದಾಗಿ ಬಾಳುವ ದೃಢಸಂಕಲ್ಪಕ್ಕೆ



ಅವರು ಪಕ್ಕಾಗಿದ್ದರು. ನಾವೆಲ್ಲ ಗಾಂಧೀಜಿ ಜೊತೆ ಒಗ್ಗಟ್ಟಿನಿಂದ ನಿಲ್ಲಬೇಕು ಎಂಬ ಖಚಿತ ತೀರ್ಮಾನಕ್ಕೆ ಜನ ಬಂದಿದ್ದರು. ಬಸರೂರು ಮತ್ತು ಕುಂದಾಪುರವೇನೂ ಅದಕ್ಕೆ ಹೊರತಾಗಿರಲಿಲ್ಲ. ನಾವು ಇಂದು ಪಡುವ ಪರಿಶ್ರಮ, ನಮ್ಮ ತ್ಯಾಗ, ಕೊಡುಗೆಗಳು ಮುಂದಿನ ತಲೆಮಾರಿನ ಅನ್ನದ ಅಗುಳುಗಳಾಗುತ್ತವೆ ಎಂಬ ಪ್ರಜ್ಞೆ ಅವರಿಗಿತ್ತು. ಇವೆಲ್ಲ ಕಾರಣಗಳಿಂದಾಗಿ ಜನ ಸ್ವಯಂಪ್ರೇರಿತರಾಗಿ, ತ್ಯಾಗ ಮನೋಭಾವದಿಂದ ಎಲ್ಲ ಚಳವಳಿಗಳಲ್ಲಿ, ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಾ ಬಂದರು. ಜನಸಮುದಾಯವನ್ನು ಒಟ್ಟುಗೂಡಿಸುವುದು ಕ್ರಮೇಣ ಸುಲಭವಾಗುತ್ತ ಹೋಯಿತು. ಈ ಭಾಗದಲ್ಲಿ ಸಾಕಷ್ಟು ಮಂದಿ ಶಿಕ್ಷಿತರು ಇದ್ದುದು ಕೂಡ ಅನುಕೂಲವಾಯಿತು ಎನ್ನುತ್ತವೆ ಅಧ್ಯಯನಗಳು.

೧೯೨೦ರಲ್ಲಿ ಗಾಂಧೀಜಿ ಜಿಲ್ಲೆಗೆ ಭೇಟಿ ನೀಡಿ ಹೋದ ಬಳಿಕ ಕಾಂಗ್ರೆಸ್ ನೇತೃತ್ವದ ರಾಜಕೀಯ ಚಟುವಟಿಕೆಗಳು ತೀವ್ರಗೊಂಡು ಅದಕ್ಕೊಂದು ಸಂಘಟಿತ ರೂಪ ಬರತೊಡಗಿತ್ತು. ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಸಮಿತಿ ರಚನೆಯಾಗಿದ್ದು ಕೂಡ ಆನಂತರವೇ (೧೯೨೧) ಎಂಬುದು ಗಮನಿಸಬೇಕಾದ ಬೆಳವಣಿಗೆ. ಇದರಿಂದ ಪ್ರೇರಣೆಯನ್ನು ಪಡೆದ ಅಮಾಸೆಬೈಲು ಕೃಷ್ಣರಾಯ ಕೊಡ್ಗಿಯವರು ಕುಂದಾಪುರ ತಾಲೂಕು ಕಾಂಗ್ರೆಸ್ ಸಮಿತಿಯನ್ನು ತಮ್ಮ ಸ್ವಂತ ಕಟ್ಟಡದಲ್ಲಿಯೇ ಸ್ಥಾಪಿಸಿದರು. ೧೯೨೩ರಲ್ಲಿ ಕುಂದಾಪುರದ ನರಿಬೇಣ ಮೈದಾನದಲ್ಲಿ ಜಿಲ್ಲಾ ರಾಜಕೀಯ ಪರಿಷತ್ತು ನಡೆಯಲು ಪ್ರೇರಣೆಯನ್ನು ನೀಡಿತು. ಅದರ ಅಧ್ಯಕ್ಷತೆ ವಹಿಸಿದವರು ಗಂಗಾಧರರಾವ್ ದೇಶಪಾಂಡೆ. ಈ ಸಮ್ಮೇಳನದಲ್ಲಿ ಕೋಟ ಶಿವರಾಮ ಕಾರಂತರು ತಾವೇ ಬರೆದ ನಾಟಕ 'ನಿಶಾ ಮಹಿಮೆ'ಯನ್ನು ಅಭಿನಯಿಸಿ, ಮದ್ಯಪಾನದಿಂದಾಗುವ ಅನಾಹುತವನ್ನು ಅನಾವರಣ ಮಾಡಿದ್ದರು.

೧೯೨೭ರಲ್ಲಿ ಮತ್ತೊಮ್ಮೆ ಗಾಂಧೀಜಿ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡುತ್ತಾರೆ. ಆಗ, ವಿದೇಶಿ ಬಟ್ಟೆಗಳನ್ನು ತ್ಯಜಿಸಿ ಖಾದಿ ಉತ್ಪನ್ನಗಳನ್ನು ತೊಡುವ ಸಂಕಲ್ಪ ಮಾಡಬೇಕು, ಹರಿಜನೋದ್ಧಾರಕ್ಕೆ ನಾವೆಲ್ಲ ಕಂಕಣಬದ್ಧರಾಗಬೇಕು ಎಂದು ಅವರು ಕರೆಯನ್ನು ಕೊಡುತ್ತಾರೆ. ಈ ಭೇಟಿ ಇಡೀ ಜಿಲ್ಲೆಯಲ್ಲಿ ಹೊಸ ಸಂಚಲನವನ್ನು ಉಂಟುಮಾಡಿತು. ಗಾಂಧಿ ಹೇಳಿದ ಮಾತುಗಳನ್ನು ತತ್ವಶಃ ಜಾರಿಗೆ ತರಲು ಜನ ಉತ್ಸುಕರಾದರು.

ಈ ರೀತಿಯ ಸಾಮಾಜಿಕ, ರಾಷ್ಟ್ರೀಯ ಪಜ್ಞೆ ಕುಂದಾಪುರದಲ್ಲಿ ಸಂಪೂರ್ಣವಾಗಿ ಅನಾವರಣಗೊಂಡಿದ್ದು ೧೯೨೯ರಲ್ಲಿ. ಆ ವರ್ಷ ಕುಂದಾಪುರದ ನರಿಬೇಣದಲ್ಲಿ ನಡೆದ ಸಾರ್ವಜನಿಕ ಸಭೆ ಕುಂದಾಪುರ–ಬಸರೂರು ಭಾಗದ ಜನರ ಒಗ್ಗಟ್ಟಿಗೆ ಸಾಕ್ಷಿಯಾಗಿತ್ತು. ಅದು ಈ ಭಾಗದ ಸ್ವಾತಂತ್ರ್ಯ ಹೋರಾಟದ ಮೊಟ್ಟ ಮೊದಲ ದಿಟ್ಟ ಹೆಜ್ಜೆ. ಅದು ಸುತ್ತಮುತ್ತಲ ಭಾಗದ ಜನರಿಗೆ ಉತ್ತಮ ಸಂದೇಶವನ್ನೂ ರವಾನೆ ಮಾಡಿತ್ತು ಎಂದರೆ ಸುಳ್ಳಲ್ಲ. ಆ ಹೊತ್ತಿಗೆ ಉಪ್ಪಿನ ಕಾಯಿದೆಯನ್ನು ಮುರಿದು ದಂಡಿಯಲ್ಲಿ ಉಪ್ಪನ್ನು ತಯಾರಿಸಿದ್ದಂತೂ ಇಡೀ ದೇಶದಲ್ಲಿ ವಿದ್ಯುತ್ ಸಂಚಾರವನ್ನುಂಟುಮಾಡಿತ್ತು. ಇದ್ದಕ್ಕಿದ್ದಂತೆ ದೇಶದಲ್ಲಿ ಉಪ್ಪಿನ ಸತ್ಯಾಗ್ರಹ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಅಂತಹ ಒಂದು ಸತ್ಯಾಗ್ರಹವನ್ನು ನಾವೂ ಮಾಡೋಣ ಎಂಬ ಧ್ವನಿ ಎಲ್ಲ ಕಡೆಗಳಿಂದಲೂ ಕೇಳಿ ಬಂತು. ೧೯೩೦ರಲ್ಲಿ ಕುಂದಾಪುರದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಜನ ಭಾಗವಹಿಸಿದ್ದರು. ಉತ್ಸಾಹಿ ಯುವಕರ ದಂಡು ತಮ್ಮ ಒಗ್ಗಟ್ಟಿನ ಪ್ರದರ್ಶನ ಮಾಡಿತ್ತು. ಅದೇ ಸಮಯದಲ್ಲಿ ಮಂಗಳೂರಿನಲ್ಲಿ ಕಾರ್ನಾಡ್ ಸದಾಶಿವರಾವ್ ಅವರ ನೇತೃತ್ವದಲ್ಲಿ ಉಪ್ಪಿನ ಸತ್ಯಾಗ್ರಹ ಬಹಳ ದೊಡ್ಡ ಮಟ್ಟದಲ್ಲಿ ನಡೆಯುತ್ತಿತ್ತು. ಇದನ್ನು ಮನಗಂಡ ಈ ಯುವಕರ ಪಡೆ ಕುಂದಾಪುರದಿಂದ ಮಂಗಳೂರಿಗೆ ವಿಜಯಯಾತ್ರೆ ಕೈಗೊಂಡು ಕಾರ್ನಾಡರ ಜೊತೆ ಸತ್ಯಾಗ್ರಹದಲ್ಲಿ ಭಾಗಿಯಾಗಿ ನಾವೂ ನಿಮ್ಮೊಂದಿಗೆ ಇದ್ದೇವೆ ಎಂಬುದನ್ನು ತಿಳಿಸುವಲ್ಲಿ ಯಶಸ್ವಿಯಾಗಿದ್ದರು. ಆ ಸತ್ಯಾಗ್ರಹದಲ್ಲಿ ಕಾರ್ನಾಡರ ಬಂಧನವಾದ ಬಳಿಕ ಅವರೆಲ್ಲ ಕುಂದಾಪುರಕ್ಕೆ ಮರಳಿದರು.

## ಉಪ್ಪಿನ ಕಾಯಿದೆ ಉಲ್ಲಂಘನೆ

ಹೀಗೆ ವಿಜಯಯಾತ್ರೆ ಹೊರಟವರಲ್ಲಿ ಗೋಪಾಲಕೃಷ್ಣ ಶೆಣೈ, ರಾಮದಾಸ ಪಡಿಯಾರ್, ಶುಂಠಿ ರಾಮಪ್ರಭು, ಸುಬ್ಬಣ್ಣ ಶೆಟ್ಟಿ, ಸೂರಪ್ಪ ಶೆಟ್ಟಿ, ಗಾಂಧಿ ರಾಮಣ್ಣ ಶೆಟ್ಟಿ, ಕೃಷ್ಣರಾಯ ಕೊಡ್ಗಿ, ಹಲ್ಸನಾಡು ಸೂರಪ್ಪಯ್ಯ, ಕೋಣಿ ಅಣ್ಣಪ್ಪ ಕಾರಂತ ಮೊದಲಾದವರು ಮುಂಚೂಣಿಯಲ್ಲಿದ್ದರು. ಮಂಗಳೂರಿಗೆ ಹೋಗಿ ಕಾರ್ನಾಡರ ಸತ್ಯಾಗ್ರಹದಲ್ಲಿ ಭಾಗಿಯಾಗಿ ಬಂದಿದ್ದು ಇಲ್ಲಿನ ಯುವಕರಲ್ಲಿದ್ದ ಕೆಚ್ಚನ್ನು ಇನ್ನಷ್ಟು ಹೆಚ್ಚಿಸಿತು. ಸ್ವಾತಂತ್ರ್ಯ ಹೋರಾಟದ



ಪೂರ್ಣ ಪ್ರಭಾವಕ್ಕೆ ಅವರು ಒಳಗಾಗಿದ್ದರು. ಆ ನಂತರ ಬ್ರಿಟಿಷರ ವಿರುದ್ಧದ ಪ್ರತಿಭಟನೆಗಳು ತೀವ್ರ ಚಳವಳಿಯ ರೂಪ ಪಡೆದವು. ಮತ್ತಷ್ಟು ಯುವಕರು ಇದಕ್ಕಾಗಿ ಟೊಂಕ ಕಟ್ಟಿದರು. ಉಪ್ಪಿನ ಸತ್ಯಾಗ್ರಹಕ್ಕೆ ಹೊಸ ಆಯಾಮ ದೊರೆಯಿತು. ಉಪ್ಪಿನ ಏಕಸ್ವಾಮ್ಯದ ಅಧಿನಿಯಮದಂತೆ ತಯಾರಿಕೆಗೆ ಸ್ವಾತಂತ್ರ್ಯವಿದ್ದರೂ ಮಾರಾಟ ಮಾತ್ರ ಸರ್ಕಾರದ ನಿಯಂತ್ರಣದಲ್ಲೇ ಇತ್ತು. ಅದರ ಪ್ರಕಾರ ಉಪ್ಪಿನ ತಯಾರಕರು ಉಪ್ಪನ್ನು ಸರ್ಕಾರಕ್ಕೇ ಮಾರಾಟ ಮಾಡಬೇಕಾಗಿತ್ತು. ಇದನ್ನು ವಿರೋಧಿಸಿದ ಯುವಕರ ಗುಂಪು ಕುಂದಾಪುರದ ಕೋಟೆಬಾಗಿಲಿನಲ್ಲಿ ಉಪ್ಪು ನೀರನ್ನು ಕುದಿಸಿ, ಅದನ್ನು ಹರಳುಗಟ್ಟಿಸಿ ಊರಿನ ಮಧ್ಯಕ್ಕೆ ತಂದು ಮಾರಾಟ ಮಾಡಲು ಆರಂಭಿಸಿದರು. ಕುಂದಾಪುರ ತಾಲೂಕಿನ ಸಮುದ್ರ ತೀರದಲ್ಲಿ ಕೆಲವು ಕಡೆ ಉಪ್ಪಿನ ಕಾಯಿದೆಯನ್ನು ಧಿಕ್ಕರಿಸಿ ಉಪ್ಪನ್ನು ತಯಾರಿಸಲಾಯಿತು.

ಉಪ್ಪಿನ ಸತ್ಯಾಗ್ರಹ ಮಾತ್ರ ಕುಂದಾಪುರ ತಾಲೂಕಿನಲ್ಲಿ ಎಂದೆಂದಿಗೂ ಮರೆಯಲಾರದ ಘಟನೆ. ೧೯೩೦ರ ಏಪ್ರಿಲ್ ೨೨ರಂದು ಮದರಾಸ್ ಉಪ್ಪಿನ ಕಾಯ್ದೆಯನ್ನು ಮುರಿದು ಉಪ್ಪನ್ನು ತಯಾರಿಸಿ ಕುಂದಾಪುರದ ನರಿಬೇಣದಲ್ಲಿ ಮಾರಿದ ಕಾರಣಕ್ಕಾಗಿ ಅಣ್ಣಪ್ಪ ಕಾರಂತರನ್ನು ಬಂಧಿಸಿ ಎರಡು ತಿಂಗಳ ಕಾಲ ಜೈಲಿನಲ್ಲಿರಿಸಲಾಯಿತು. ಮಂಗಳೂರು ಸಬ್‌ಜೈಲಿನ ದಾಖಲೆಗಳು ಇದನ್ನು ಪುಷ್ಟೀಕರಿಸುತ್ತವೆ. ಕಾರಂತರ ಬಂಧನ ಚಳವಳಿಕಾರರನ್ನು ಕಂಗೆಡಿಸಲಿಲ್ಲ, ಬದಲಾಗಿ ಹುರಿದುಂಬಿಸಿತು. ಅನೇಕ ಸತ್ಯಾಗ್ರಹಿಗಳು ಪೊಲೀಸರ ಬೆತ್ತದ ರುಚಿನ್ನುಂಡರು. ಕೃಷ್ಣರಾಯ ಕೊಡ್ಗಿ ಮತ್ತು ಇತರರು ಮತ್ತೆ ಕಾಯಿದೆಯನ್ನು ಉಲ್ಲಂಘಿಸಿ ಉಪ್ಪು ತಯಾರಿಸಿ ಮಾರಾಟ ಮಾಡಿದರು. ಅಷ್ಟೂ ಮಂದಿ ಚಳವಳಿಕಾರರನ್ನು ಬಂಧಿಸಿ ಮಂಗಳೂರು ಸಬ್‌ಜೈಲು ಮತ್ತು ಅಲ್ಲಿಂದ ತಿರುಚಿನಾಪಳ್ಳಿ ಜೈಲಿಗೆ ಕಳುಹಿಸಲಾಯಿತು. ಅಲ್ಲಿ ಅವರು ಆರು ತಿಂಗಳ ಕಾಲ ಸೆರವಾಸ ಅನುಭವಿಸಿದ್ದರು. ಹೀಗೆ ಉಪ್ಪಿನ ಸತ್ಯಾಗ್ರಹ ಎನ್ನುವುದು ೩೦೦ ಕಿ.ಮೀ. ಕರಾವಳಿ ತೀರದ ಉದ್ದಕ್ಕೂ ಸರಣಿಯಂತೆ ನಡೆದವು. ಮಹಿಳೆಯರು ಕೂಡ ಸ್ವಯಂಪ್ರೇರಿತರಾಗಿ ಬಂದು ಜೈಲು ಶಿಕ್ಷೆಯನ್ನು ಅನುಭವಿಸಿದರು. ಇಂತಹ ತೀವ್ರ ಸ್ವರೂಪದ ಚಳವಳಿಯಿಂದಾಗಿ ಕರಾವಳಿ ಪ್ರದೇಶದ ಪೊಲೀಸರು ಮತ್ತು ಅಧಿಕಾರಿಗಳು ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯಬೇಕಾಗಿಬಂದಿತ್ತು.

ಬೆಳಗಾಯಿತೆಂದರೆ ಎಲ್ಲಿ ಚಳವಳಿ ಶುರುವಾಗುತ್ತದೋ ಎಂಬ ಭಯದಲ್ಲಿ ಅವರೆಲ್ಲ ಕಂಗಾಲಾಗಿ ಹೋಗಿದ್ದರು. ಕಣ್ಣುಜ್ಜಿಕೊಂಡು ಎದ್ದು ಕುಳಿತರೂ ಅವರಿಗೆ ಚಳವಳಿಕಾರರು ಕಾಣುತ್ತಿದ್ದರು.

ವಿದೇಶಿ ಬಟ್ಟೆಯನ್ನು ಬಹಿಷ್ಕರಿಸಿ ಖಾದಿ ಬಟ್ಟೆಯನ್ನು ಧರಿಸುವ ಚಳವಳಿಗೆ ದಕ್ಷಿಣ ಕನ್ನಡದ ಇತರ ಕಡೆಗಳಲ್ಲಿ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಬೆಂಬಲ ನೀಡಿದ್ದರು. ನಮ್ಮದಲ್ಲದ ಗಿರಣಿ ಬಟ್ಟೆಯನ್ನು ನಾವೆಂದೂ ತೊಡುವುದಿಲ್ಲ ಎಂದು ಸುಗುಣ ಬಾಯಿ, ರಾಧಾ ಬಾಯಿ ಮೊದಲಾದವರು ಸಂಕಲ್ಪ ಮಾಡಿದ್ದು ಮಾತ್ರವಲ್ಲದೆ ತಾವುಟ್ಟ ಬಟ್ಟೆಯನ್ನು ಬೆಂಕಿಗೆ ಹಾಕಿ ಪ್ರತಿಭಟನೆಗೆ ಧುಮುಕಿದ್ದರು. ಕುಂದಾಪುರದಲ್ಲಿ ವಿದೇಶಿ ಬಟ್ಟೆ ವಿರುದ್ಧ ಪ್ರತಿಭಟನೆಯ ಕಾವು ಹೆಚ್ಚಲು ಇದೂ ಒಂದು ರೀತಿಯಲ್ಲಿ ಪ್ರಚೋದನೆಯನ್ನು ನೀಡಿತ್ತು ಎಂದರೆ ತಪ್ಪಾಗಲಿಕ್ಕಿಲ್ಲ. ಅದೇ ರೀತಿ ಶರಾಬು ಅಂಗಡಿ ವಿರುದ್ಧ ಪಿಕೆಟಿಂಗ್, ಕರನಿರಾಕರಣೆಯಂತಹ ಪ್ರತಿಭಟನೆಗಳು ಈ ಪ್ರದೇಶದಲ್ಲಿ ಅನೂಚಾನವಾಗಿ ನಡೆದವು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಗಳು ಬಹುದೊಡ್ಡ ಪಾತ್ರವನ್ನು ನಿರ್ವಹಿಸಿದವು. ಕೋಟ ಶಿವರಾಮ ಕಾರಂತರು ಕುಂದಾಪುರದಿಂದಲೇ ಪ್ರಕಟಿಸುತ್ತಿದ್ದ ಪತ್ರಿಕೆ **'ವಸಂತ'**. ಇದರಲ್ಲಿ ಮದ್ಯಪಾನ ವಿರುದ್ಧದ, ಖಾದಿ ಬಟ್ಟೆಯನ್ನು ಉತ್ತೇಜಿಸುವ, ಹರಿಜನೋದ್ಧಾರದ ಲೇಖನ, ನಾಟಕಗಳು ನಿರಂತರವಾಗಿ ಪ್ರಕಟವಾಗುತ್ತಿದ್ದವು. ಇದು ಜನರಲ್ಲಿ ಸಾಮಾಜಿಕ, ರಾಜಕೀಯ ಪ್ರಜ್ಞೆಯನ್ನು ಹುಟ್ಟುಹಾಕುವಲ್ಲಿ ಪ್ರೇರಕಶಕ್ತಿಯಾಗಿತ್ತು.

## ಗಾಂಧಿ ಹರಿಜನ ಪ್ರವಾಸ

ಮಹಾತ್ಮ ಗಾಂಧಿ ಅವರು ೧೯೩೩ ಮತ್ತು ೩೪ರಲ್ಲಿ ದೇಶದಾದ್ಯಂತ ಸುದೀರ್ಘ ಪ್ರವಾಸವನ್ನು ಕೈಗೊಂಡರು. ಅದು ೧೨೫೦೦ ಮೈಲಿಗಳ **'ಹರಿಜನ ಪ್ರವಾಸ'**. ದೇಶದ ಕುಗ್ರಾಮಗಳ ದರ್ಶನವನ್ನು ಪಡೆದು ಅಲ್ಲಿ ಹೀನಾತಿಹೀನ ಸ್ಥಿತಿಯಲ್ಲಿರುವ ಜನರನ್ನು ಪ್ರತ್ಯಕ್ಷವಾಗಿ ಕಾಣಬೇಕು ಮತ್ತು ರಾಷ್ಟ್ರಾದ್ಯಂತ ಅಸ್ಪೃಶ್ಯತೆಯ ಸಂದೇಶವನ್ನು ಸಾರಬೇಕು ಎನ್ನುವುದು ಅವರ ಉದ್ದೇಶವಾಗಿತ್ತು. ಅವರು ಈ ಪ್ರವಾಸದ ವೇಳೆ ಮಾಡಿದ ಸಾರ್ವಜನಿಕ ಸಭೆ, ಭಾಷಣಗಳು ಹಾಗೂ ಜನರೊಂದಿಗೆ ನಡೆಸಿದ ಸಂವಾದ ದೇಶದ ಉದ್ದಗಲಕ್ಕೂ ಬೀರಿದ



ಪರಿಣಾಮವನ್ನು ಮಾತುಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ. ಅವರಾಡಿದ ಮಾತುಗಳು ಜನರ ಮೇಲೆ ಎಷ್ಟು ಪ್ರಭಾವ ಬೀರಿತೆಂದರೆ ಲಕ್ಷೋಪಲಕ್ಷ ಜನ ತಮ್ಮ ವರ್ತನೆ, ನಡವಳಿಕೆ, ಜೀವನಕ್ರಮವನ್ನು ಬದಲಿಸಿಕೊಂಡರು. ಹರಿಜನ ಪ್ರವಾಸ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತ ಗಾಂಧಿಯನ್ನು ಜೀವನದಲ್ಲಿ ಒಮ್ಮೆಯಾದರೂ ಕಣ್ತುಂಬಾ ನೋಡೋಣವೆಂದು ಹಾದಿಗುಂಟ ಗಾಂಧಿ ದರ್ಶನಕ್ಕೆ ಜನಸಾಗರವೇ ನೆರೆದಿತ್ತು ಎನ್ನುತ್ತವೆ ಪತ್ರಿಕಾ ವರದಿಗಳು.

ಗಾಂಧಿ ಈ ಪ್ರವಾಸ ಕೈಗೊಂಡ ಇನ್ನೊಂದು ಉದ್ದೇಶ 'ಹರಿಜನ ನಿಧಿ'ಯನ್ನು ಸಂಗ್ರಹ ಮಾಡುವುದು. ಗಾಂಧಿ ಪ್ರವಾಸ ಹೊರಟ ಸಂದರ್ಭದಲ್ಲಿಯೇ ಬಿಹಾರದಲ್ಲಿ ಭೂಕಂಪ ಸಂಭವಿಸಿ ಅಪಾರ ಪ್ರಮಾಣದ ಸಾವು ನೋವು ಉಂಟಾಗಿತ್ತು. ಹಾಗಾಗಿ ಹರಿಜನ ನಿಧಿಯ ಜೊತೆ 'ಭೂಕಂಪ ನಿಧಿ'ಯನ್ನೂ ಗಾಂಧಿ ಸಂಗ್ರಹಿಸುತ್ತ ಹೊರಟರು. ಅವರ ಸದುದ್ದೇಶವನ್ನು ಅರಿತ ಅನೇಕರು ತಮ್ಮಲ್ಲಿ ಇದ್ದಷ್ಟು ಹಣವನ್ನು ದಾನ ಮಾಡಿದ್ದು ಮಾತ್ರವಲ್ಲದೆ ದೇಶದುದ್ದಕ್ಕೂ ಜನ ತಾವು ಬಹಳ ಕಾಲದಿಂದ ಕಾದಿಟ್ಟುಕೊಂಡ ಅಮೂಲ್ಯ ವಸ್ತುಗಳನ್ನು, ಬಂಗಾರದ ಆಭರಣಗಳನ್ನು ಧಾರೆ ಎರೆದರು. ಗಾಂಧಿಯ ಈ ಪ್ರವಾಸದ ನೆನಪನ್ನು ಶಾಶ್ವತಗೊಳಿಸಲು ನೂರಾರು ಗಾಂಧಿ ಸ್ಮಾರಕಗಳು ನಿರ್ಮಾಣ ಗೊಂಡವು. ಒಂದು ಸಮಸಮಾಜವನ್ನು ಕಟ್ಟಲು ಹೊರಟಿದ್ದ ಮಹಾತ್ಮ ಗಾಂಧಿ ನಮ್ಮ ಜನಮಾನಸವನ್ನು ಹೇಗೆ ಪ್ರಭಾವಿಸಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿತ್ತು.

ಈ ಪ್ರವಾಸದ ಉತ್ತರಾರ್ಧದಲ್ಲಿ, ಅಂದರೆ ೧೯೩೪ರ ಫೆಬ್ರವರಿ ೨೪ ಮತ್ತು ೨೫ರಂದು ದಕ್ಷಿಣ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ, ಮುಲ್ಕಿ, ಉಡುಪಿ ಮತ್ತು ಕುಂದಾಪುರಕ್ಕೆ ಭೇಟಿ ನೀಡಿದರು. ಇದು ಗಾಂಧಿ ಈ ಜಿಲ್ಲೆಗೆ ನೀಡಿದ ಮೂರನೇ ಹಾಗೂ ಕೊನೆಯ ಭೇಟಿ.

**"ಅದೊಂದು ಜೀವನದ ಅಪರೂಪದಲ್ಲಿ ಅಪರೂಪದ ಕ್ಷಣ. ಗಾಂಧಿ ಅವರನ್ನು ಕಣ್ತುಂಬಿಕೊಳ್ಳುವುದು ನಮ್ಮೆಲ್ಲರ ಪಾಲಿನ ಭಾಗ್ಯವಾಗಿತ್ತು. ನಮ್ಮ ಹಳ್ಳಿಯ ಮಾರ್ಗದಲ್ಲಿ ಕಾರಿನಲ್ಲಿ ಸಾಗಿದ ಗಾಂಧಿ ಅವರು ತಮ್ಮ ನಡೆ–ನುಡಿಯ ಮೂಲಕ ನಮ್ಮ ಹೃದಯವನ್ನು ಬೆಸೆದರು. ನಾವೆಲ್ಲ ಶ್ರದ್ಧಾಭಕ್ತಿಯಿಂದ ರಸ್ತೆಯ**

**ಇಕ್ಕೆಲಗಳಲ್ಲಿ ನಿಂತು 'ಮಹಾತ್ಮ ಗಾಂಧಿ ಕಿ ಜೈ' ಎಂಬ ಘೋಷಣೆಗಳನ್ನು ಕೂಗಿದೆವು"** ಎಂದು ಹಿರಿಯರು ನೆನಪು ಮಾಡಿಕೊಂಡ ಪತ್ರಿಕಾ ವರದಿಗಳು ಇವೆ. ಗಾಂಧಿ ಕೈಗೊಂಡ ಈ ಪ್ರವಾಸದ ವಿವರಗಳು ಅವರೇ ನಡೆಸುತ್ತಿದ್ದ **'ಹರಿಜನ'** ಪತ್ರಿಕೆಯ ಎರಡನೇ ಸಂಪುಟದಲ್ಲಿ ವರದಿಯಾಗಿದ್ದವು.

೧೯೩೪ರ ಫೆ. ೨೪ರಂದು ಬೆಳಗಿನ ಜಾವ ಮಡಿಕೇರಿ ಮೂಲಕ ಹೊರಟ ಗಾಂಧೀಜಿ ಸಂಪಾಜೆ, ಸುಳ್ಯ ಮೂಲಕ ಪುತ್ತೂರಿಗೆ ಭೇಟಿ ಕೊಟ್ಟು ಸಂಜೆ ಮಂಗಳೂರಿನಲ್ಲಿ ನಾಲ್ಕು ಕಾರ್ಯಕ್ರಮಗಳಲ್ಲಿ ಭಾಷಣವನ್ನು ಮಾಡುತ್ತಾರೆ. ೨೫ರಂದು ಬೆಳಗ್ಗೆ ಹರಿಜನ ಕೇರಿಗೆ ಭೇಟಿ ನೀಡುವ ಗಾಂಧಿ ಕೆನರಾ ಹೈಸ್ಕೂಲ್‌ನಲ್ಲಿ ಜನರೊಂದಿಗೆ ಮುಖಾಮುಖಿಯಾಗಿ ಮುಲ್ಕಿ ಮತ್ತು ಉಡುಪಿಯಲ್ಲಿ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಾರೆ. ಉಡುಪಿಯಲ್ಲಿ ಕಾಡುಬೆಟ್ಟು ಶ್ರೀನಿವಾಸ ಪೈ ಅವರ ಖಾದಿ ಭಂಡಾರವನ್ನು ಉದ್ಘಾಟಿಸಿದ ಅವರು ಅಜ್ಜರಕಾಡು ಮೈದಾನದಲ್ಲಿ ಜನಸಭೆಯಲ್ಲಿ ಪಾಲ್ಗೊಳ್ಳುತ್ತಾರೆ. ಅಂದು ೬೦೦೦ಕ್ಕೂ ಅಧಿಕ ಜನ ಗಾಂಧಿ ಭಾಷಣ ಕೇಳಲು ಜಮಾಯಿಸಿದ್ದರು. ಅಲ್ಲಿ ಜನರು ಸಂಗ್ರಹಿಸಿ ಕೊಟ್ಟ ಹಣ ೧೨೪೦ ರೂಪಾಯಿ. ಅಂದು ೧೦ ವರ್ಷದ ಬಾಲಕಿ ನಿರುಪಮಾ ತಾನು ಧರಿಸಿದ್ದ ಚಿನ್ನದ ಬಳೆ, ಹಾರ ಮತ್ತು ಕಿವಿಯೋಲೆಯನ್ನು ಗಾಂಧೀಜಿಗೆ ದಾನ ಮಾಡಿದ್ದು ಸ್ಮರಣಾರ್ಹ. ಉಡುಪಿ ಕಾರ್ಯಕ್ರಮದ ಉದ್ದಕ್ಕೂ ಅವರ ಜೊತೆಗಿದ್ದವರು ಉಡುಪಿಯ ಗಾಂಧಿವಾದಿ ಹಾಜಿ ಅಬ್ದುಲ್ಲಾ ಸಾಹೇಬ್. ಬ್ರಹ್ಮಾವರದಲ್ಲಿಯೂ ಗಾಂಧಿ ಅವರಿಗೆ ಜನ ನಿಧಿಯನ್ನು ಅರ್ಪಿಸಿದರು. ಇವೆಲ್ಲವೂ **'ರಾಷ್ಟ್ರಬಂಧು'** ಪತ್ರಿಕೆ, ೨೮–೦೨–೧೯೩೪ರ ಹಿಂದೂ ಪತ್ರಿಕೆ ಹಾಗೂ Collected works of Mahatma Gandhi (Volume-57)ಯಲ್ಲಿ ವರದಿಯಾಗಿವೆ.

❑

## ಅಧ್ಯಾಯ–೨
## ಆತ್ಮಶುದ್ಧೀಕರಣದ ಚಳವಳಿ ಕುಂದಾಪುರದಲ್ಲಿ ಗಾಂಧಿ

ಅವಿಭಜಿತ ಜಿಲ್ಲೆಯ ಕೊನೆಯ ಭಾಗವಾಗಿ ಗಾಂಧಿ ಕುಂದಾಪುರಕ್ಕೆ ತಲುಪಿದಾಗ ರಾತ್ರಿ ಎಂಟು ಗಂಟೆಯಾಗಿತ್ತು. ಆದರೂ ಜನ ಸಾವಿರಾರು ಸಂಖ್ಯೆಯಲ್ಲಿ ಕಾದಿದ್ದರು. ಇಲ್ಲಿನ ನರಿಬೇಣ ಮೈದಾನದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ವಹಿಸಿದವರು ಎಂಬತ್ತು ವರ್ಷದ ಹಿರಿಯ ಮುತ್ಸದ್ದಿ, ಗಾಂಧಿವಾದಿ ಮಂಜಯ್ಯ ಶೇರೆಗಾರ್. ಖಿಲಾಫತ್ ಸ್ವಯಂಸೇವಕರು ಕೂಡ ಈ ಸಭೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದರು. ಜನ ಸ್ವಯಂಪ್ರೇರಿತರಾಗಿ ಹರಿಜನ ನಿಧಿ ಮತ್ತು ಭೂಕಂಪ ನಿಧಿಗೆ ಹಣವನ್ನು ನೀಡುತ್ತಾರೆ. ಅಂದು ಗಾಂಧಿ ಸಾರ್ವಜನಿಕ ಸಭೆಯಲ್ಲಿ ಮಂಡಿಸಿದ ವಿಚಾರಪ್ರಚೋದಕ ಭಾಷಣ ನಿಜಕ್ಕೂ ಚಾರಿತ್ರಿಕವಾಗಿತ್ತು. ಅಸ್ಪೃಶ್ಯತೆ ವಿರುದ್ಧದ ತಮ್ಮ ಈ ಹೋರಾಟವನ್ನು ಅವರು ಆತ್ಮ ಶುದ್ಧೀಕರಣದ, ಪಶ್ಚಾತ್ತಾಪದ ಚಳವಳಿ ಎಂದು ಕರೆದರು. ಅವರ ಭಾಷಣದ ಆಯ್ದ ಭಾಗ ಇಲ್ಲಿದೆ:

"ಈ ದೇಶದ ಅಸ್ಪೃಶ್ಯತೆಯ ಬೇರನ್ನೂ, ಕೊಂಬೆಗಳನ್ನೂ ನಾವು ನಾಶಮಾಡಬೇಕು. ಈ ಬಹುತಲೆಗಳ ಪೆಡಂಭೂತವು ನಮ್ಮ ಸಮಾಜದ ಎಲ್ಲ ಭಾಗಗಳಲ್ಲಿಯೂ ಆವರಿಸಿಕೊಂಡಿದೆ. ಹಾಗಾಗಿ ನಾವು ಒಬ್ಬರನ್ನೊಬ್ಬರು ಮುಟ್ಟಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದೇವೆ. ಒಂದು ಜಾತಿ ಇನ್ನೊಂದು ಜಾತಿಯನ್ನು ಮುಟ್ಟಲಾಗದ ಸ್ಥಿತಿಯಲ್ಲಿ ಬದುಕುತ್ತಿದ್ದೇವೆ. ಒಂದು ಜಾತಿ, ಒಂದು ವರ್ಗ ಇನ್ನೊಂದಕ್ಕಿಂತ ಉತ್ತಮವೆಂದಾಗಲಿ, ಕೀಳೆಂದಾಗಲಿ ಪರಿಗಣಿಸಲು ಸಾಧ್ಯವಿಲ್ಲ. ಇಂತಹ ಮೇಲರಿಮೆ ಮತ್ತು ಕೀಳರಿಮೆ ಜಾತಿ ಕಲಹಕ್ಕೆ ನಾಂದಿಯಾಗಿದೆ. ಈ

ಕಾರಣದಿಂದ ನಮ್ಮ ಹೋರಾಟದ ಉದ್ದೇಶವನ್ನು ನೀವೆಲ್ಲ ಅರ್ಥ ಮಾಡಿಕೊಳ್ಳಬೇಕು. ಮಾನವರಲ್ಲಿ ಸಹೋದರತ್ವವನ್ನು ಬಯಸುವ ನಾವು ಇನ್ನೂ ಅಸ್ಪೃಶ್ಯತೆಗೆ ದೈವಿಕ ಪುರಸ್ಕಾರವಿದೆ ಎಂದು ನಂಬಿಕೊಂಡಿದ್ದೇವೆ. ಇದನ್ನು ನಮ್ಮ ಮನಸ್ಸಿನಿಂದ ಕಿತ್ತು ಹಾಕದೇ ಏನ್ನನ್ನೂ ಸಾಧಿಸಲು ಸಾಧ್ಯವಿಲ್ಲ. ಸವರ್ಣ ಹಿಂದುಗಳು ಎಂದು ಭಾವಿಸಿರುವವರೆಲ್ಲ ಸೇರಿ ಪರ್ಯಾಲೋಚನೆ ನಡೆಸಿ ಅಂತಿಮ ನಿರ್ಧಾರಕ್ಕೆ ಬರಬೇಕು. ಅವರು ಅಸ್ಪೃಶ್ಯತೆಯ ಅಸ್ತಿತ್ವವನ್ನು ಅನಂತ ಕಾಲದತನಕ ಉಳಿಸಿಕೊಂಡರೆ ಅವರೂ, ಹಿಂದು ಧರ್ಮವೂ ಒಂದು ದಿನ ನಾಶವಾಗುವುದು ನಿಶ್ಚಿತ. ಅವರಿಗೆ ಬದುಕಲು ಇರುವ ಏಕೈಕ ದಾರಿ ಎಂದರೆ ಅಸ್ಪೃಶ್ಯತೆಯನ್ನು ಮೂಲೋತ್ಪಾಟನೆ ಮಾಡುವುದು. ಈ ಕಾರಣದಿಂದಲೇ ನಾನು ಈ ಹೋರಾಟವನ್ನು **ಆತ್ಮ ಶುದ್ಧೀಕರಣ ಹಾಗೂ ಪಶ್ಚಾತ್ತಾಪದ ಚಳವಳಿ** ಎಂದು ಕರೆದಿದ್ದೇನೆ. ಈ ಹೋರಾಟ ಹರಿಜನರನ್ನು ಸಾಂತ್ವನಗೊಳಿಸುವ ಚಳವಳಿಯೂ ಹೌದು. ಶತಶತಮಾನಗಳಿಂದ ಅವರನ್ನು ನಾವು ಎತ್ತಿ ಹಿಡಿದಿದ್ದೇವೆ. ಇನ್ನೂ ನಾವು ಅವರನ್ನು ಎತ್ತಿ ಹಿಡಿಯಬೇಕು ಎಂದರೆ ಅದು ನಮ್ಮನ್ನೇ ನಾವು ಕೀಳು ಮಾಡಿಕೊಂಡಂತೆ. ಇನ್ನಾದರೂ ನಾವು ಪಾಠ ಕಲಿಯೋಣ. ಅಸ್ಪೃಶ್ಯತೆಯ ಬೇರನ್ನು ನಮ್ಮ ಹೃದಯದಿಂದಲೇ ಕಿತ್ತು ಹಾಕೋಣ."

ಸಭೆಯ ಕೊನೆಯಲ್ಲಿ ಗಾಂಧಿಗೆ ಕೊಟ್ಟ ಕೊಡುಗೆಗಳನ್ನೆಲ್ಲ ಹರಾಜು ಹಾಕಿದಾಗ ಬಂದ ಹಣ ೪೦೦ ರೂ. ಅದನ್ನು ಕೂಡ ನಿಧಿಗೆ ಸಮರ್ಪಣೆ ಮಾಡಲಾಯಿತು. ಆ ದಿನ ರಾತ್ರಿ ನರಿಬೇಣ ಮೈದಾನದ ಬಲಭಾಗದಲ್ಲೇ ಇದ್ದ ಸ್ವಾತಂತ್ರ್ಯ ಹೋರಾಟಗಾರ ಗೋಪಾಲಕೃಷ್ಣ ಕಾಮತ್ ಅವರ ಮನೆಯಲ್ಲಿ ಗಾಂಧಿ ತಂಗುತ್ತಾರೆ. ಗಾಂಧೀಜಿ ಅವರು ಅಂದು ತಂಗಿದ ಮನೆಯನ್ನು **'ಶಾಂತಿ ನಿಕೇತನ'** ಎಂದು ಕರೆಯಲಾಗುತ್ತಿತ್ತು. ಅಲ್ಲೀಗ ಆ ಮನೆ ಇಲ್ಲ, ಕಾಮತರ ಮನೆಗೆ ಹೋಗುವ ರಸ್ತೆಗೆ ಹಾಕಿರುವ ಕಮಾನಿನಲ್ಲಿ ಬರೆದ **'ಶಾಂತಿ ನಿಕೇತನ'** ಮಾತ್ರ ನಿಮ್ಮನ್ನು ಸ್ವಾಗತಿಸುತ್ತದೆ. ಕಾಮತರ ಪಕ್ಕದ ಮನೆಯಲ್ಲಿ ಗಾಂಧಿ ಬಳಸಿದ 'ದುಂಡು ಮೇಜು' ಈಗಲೂ ಇದೆ.

ಮರುದಿನ ಫೆ.೨೬ ಸೋಮವಾರ. ಅದು ಗಾಂಧೀಜಿಯವರ **'ವಾರದ ಮೌನ ದಿನ'**. ಅಂದು ಯಾರೊಂದಿಗೂ ಅವರು ಮಾತನಾಡುತ್ತಿರಲಿಲ್ಲ. ಹಾಗೆ ಇಡೀ ದಿನವನ್ನು ಅವರು ಮೌನವಾಗಿಯೇ ಕುಂದಾಪುರದಲ್ಲಿ ಕಳೆದರು. ಮರುದಿನ ಬೆಳಗ್ಗೆ ಕುಂದಾಪುರದಿಂದ ಗಾಂಧಿ ನಿರ್ಗಮಿಸುತ್ತಾರೆ. ಗಾಂಧಿ ಅವರ ಕಾರು ಕುಂದಾಪುರದ ಕೋಟೆ ಬಾಗಿಲಿನಲ್ಲಿ 'ಜಂಗಲ್'ನ್ನು ಏರಿ **ದಯಾವತಿ** ಸ್ಟೀಮರ್ (ಉಗಿ ಹಡಗು) ಮೂಲಕ ಕಾರವಾರದತ್ತ ಪ್ರಯಾಣ ಬೆಳೆಸುತ್ತದೆ. ಠಕ್ಕರ್ ಬಾಪಾ ಎನ್ನುವವರು ಕೂಡ ಗಾಂಧಿ ಜೊತೆಗಿದ್ದರು.



## ಕುಂದಾಪುರಕ್ಕೆ ಬಂದ ನೆಹರೂ

ಗಾಂಧಿ ಕುಂದಾಪುರ ಭೇಟಿ, ಸಮಸಮಾಜವನ್ನು ಕಟ್ಟುವ ಅವರ ಕಳಕಳಿ ಜನರ ಮೇಲೆ ಬಹಳದೊಡ್ಡ ಪರಿಣಾಮವನ್ನು ಬೀರಿತು ಎಂದು ವಿಶ್ಲೇಷಿಸಲಾಗುತ್ತದೆ. ಸ್ವಾತಂತ್ರ್ಯ ಹೋರಾಟ, ಚಳವಳಿ, ಪ್ರತಿಭಟನೆಗಳು ಹೆಚ್ಚು ಸಂಘಟನಾತ್ಮಕ ಸ್ವರೂಪವನ್ನು ಪಡೆದುಕೊಂಡವು. ನಂತರದ ವರ್ಷಗಳಲ್ಲಿ ಪ್ರಾಂತೀಯ ಸ್ವಾಯತ್ತತೆಗೆ ಅವಕಾಶ ನೀಡಿದ್ದು, ಹೊಸ ಕಾನೂನಿನಂತೆ ಪ್ರಾಂತ ಸರ್ಕಾರಗಳಿಗೆ ಚುನಾವಣೆ ನಡೆಸುವ ತೀರ್ಮಾನ ಕೈಗೊಂಡಿದ್ದು ಮಹತ್ವದ ತಿರುವು. ಈ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರೂ ಕಣಕ್ಕಿಳಿಯಲು ನಿರ್ಧರಿಸಿದರು. ಈ ಚುನಾವಣೆಯ ಪ್ರಚಾರಕ್ಕೆ ಆಗಮಿಸಬೇಕು ಎಂದು ಅಂದಿನ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಜವಾಹರಲಾಲ ನೆಹರೂ ಅವರಲ್ಲಿ ಮನವಿ ಮಾಡಿಕೊಳ್ಳಲಾಯಿತು. ಅದಕ್ಕೆ ಓಗೊಟ್ಟ ನೆಹರೂ ಅವರು ೧೯೩೭ರ ಫೆ.೧೧ರಂದು ದಕ್ಷಿಣ ಕನ್ನಡ ಜಿಲ್ಲೆಗೆ ಆಗಮಿಸಿ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಚುನಾವಣಾ ಪ್ರಚಾರ ಕೈಗೊಂಡರು. ಅವರ ಪ್ರಚಾರ ಕಾರ್ಯದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಎ.ಬಿ.ಶೆಟ್ಟಿ, ಮುದವೀಡು ಕೃಷ್ಣರಾಯರು ಮೊದಲಾದವರು ಜೊತೆಗೂಡಿದ್ದರು.

ಮರುದಿನ ಸಂಜೆ ಅವರು ಕುಂದಾಪುರಕ್ಕೆ ಆಗಮಿಸಿ ನರಿಬೇಣದಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು. ನೆಹರೂ ಅವರನ್ನು ನೋಡಲೆಂದು ಹಳ್ಳಿಹಳ್ಳಿಗಳಿಂದ ಜನ ಆಗಮಿಸಿದ್ದರು. ಅಂದು ಸೇರಿದ್ದ ಅಪಾರ ಜನಸ್ತೋಮವನ್ನು ನಿಯಂತ್ರಿಸಲು ಸ್ವಯಂಸೇವಕರಿಗೆ ಅಸಾಧ್ಯವಾಗಿ ಹೋಯಿತು. ಗೌಜಿ, ಗದ್ದಲ, ನೂಕು-ನುಗ್ಗಲು ವಿಪರೀತವಾದಾಗ ನೆಹರೂ ಅವರೇ ಶಾಂತಚಿತ್ತದಿಂದ ಎದ್ದು ಬಂದು ಜನರ ನಡುವೆ ನಿಂತರು. ಎಲ್ಲರೂ

ಶಾಂತರಾಗಿರುವಂತೆ ಜನರಲ್ಲಿ ಮನವಿ ಮಾಡಿಕೊಂಡರು. ತಕ್ಷಣ ಇಡೀ ಸಭೆ ಸ್ತಬ್ಧವಾಯಿತು.

"ಜನರೊಂದಿಗೆ ಯಾವತ್ತೂ ಶಾಂತಿಯಿಂದ ವರ್ತಿಸಬೇಕು. ನೀವು ಪೊಲೀಸರಲ್ಲ. ಸ್ವಯಂಸೇವಕರ ಕರ್ತವ್ಯ ಅದು" ಎಂದು ನೆಹರೂ ಸ್ವಯಂಸೇವಕರಿಗೆ ಮನವರಿಕೆ ಮಾಡಿಕೊಟ್ಟರು.

ಹೀಗೆ ಗಾಂಧಿ ಮತ್ತು ನೆಹರೂ ಅವರ ಕುಂದಾಪುರ ಭೇಟಿ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದುಬಿಟ್ಟಿತು. ಈಗಲೂ ಕುಂದಾಪುರ ಭಾಗದ ಬಹುತೇಕರು ಗಾಂಧಿ ನರಿಬೇಣದಲ್ಲಿ ಮಾಡಿದ ಭಾಷಣ, ಇಲ್ಲಿಯೇ ಮೊಕ್ಕಾಂ ಮಾಡಿದ್ದು ಹಾಗೂ ನೆಹರೂ ಜನರೊಂದಿಗೆ ಪ್ರೀತಿಯಿಂದ ಬೆರೆತದ್ದನ್ನು ನೆನಪು ಮಾಡಿಕೊಳ್ಳುತ್ತಾರೆ. ರಾಷ್ಟ್ರೀಯ ನಾಯಕರ ಈ ಭೇಟಿ ತಾಲೂಕಿನಾದ್ಯಂತ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಸತ್ಯಾಗ್ರಹಿಗಳಲ್ಲಿ ಹೊಸ ಹುಮ್ಮಸ್ಸನ್ನು ಮೂಡಿಸಿತು. ಸತ್ಯಾಗ್ರಹಿಗಳನ್ನು ಬ್ರಿಟಿಷರು ಬಂಧಿಸುವುದು, ಜೈಲಿಗೆ ಅಟ್ಟುವುದನ್ನು ನಿಲ್ಲಿಸಲಿಲ್ಲ. ತಿಂಗಳುಗಳ ಕಾಲ ಜೈಲಿನಲ್ಲಿದ್ದು ಬರುತ್ತಿದ್ದ ಸತ್ಯಾಗ್ರಹಿಗಳು ಮತ್ತೆ ಪ್ರತಿಭಟನೆ, ಹೋರಾಟ ಮಾಡುವುದನ್ನೂ ನಿಲ್ಲಿಸಲಿಲ್ಲ. ಜನರನ್ನು ಹದ್ದುಬಸ್ತಿನಲ್ಲಿಡಲು ಪ್ರಯತ್ನ ಮಾಡಿದಷ್ಟೂ ಅದು ಇನ್ನಷ್ಟು ಉಗ್ರ ಸ್ವರೂಪ ಪಡೆದುಕೊಳ್ಳುತ್ತಿತ್ತು.

**'ಕ್ವಿಟ್ ಇಂಡಿಯಾ' ಚಳವಳಿ (೧೯೪೨)** ಇಡೀ ದೇಶದಲ್ಲಿ ತೀವ್ರಗೊಂಡು ಬ್ರಿಟಿಷರ ಪಾಲಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಆ ವರ್ಷ ಆಗಸ್ಟ್ ೭ ಮತ್ತು ೮ರಂದು ಮುಂಬೈನ ಗೋವಾಲಿಕಾ ಟ್ಯಾಂಕ್ ಮೈದಾನದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮಹಾ ಅಧಿವೇಶನದಲ್ಲಿ ಗಾಂಧೀಜಿ ಬ್ರಿಟಿಷರ ವಿರುದ್ಧದ ಹೋರಾಟವನ್ನು 'ಮಾಡು ಇಲ್ಲವೇ ಮಡಿ' ಹಂತಕ್ಕೆ ಕೊಂಡೊಯ್ದಿದ್ದರು. ಅಧಿವೇಶನದಲ್ಲಿ ಇಂತಹುದೊಂದು ಘೋಷಣೆ ಮೊಳಗುತ್ತಿದ್ದಂತೆ ಬ್ರಿಟಿಷ್ ಸರ್ಕಾರವು ದೇಶದ ಉದ್ದಗಲಕ್ಕೂ ಸಿಕ್ಕಸಿಕ್ಕಲ್ಲಿ ಕಾಂಗ್ರೆಸ್ ನಾಯಕರನ್ನು ಬಂಧಿಸಿ ಜೈಲಿಗಟ್ಟಲು ಆರಂಭಿಸಿತು. ಇದು ದಕ್ಷಿಣ ಕನ್ನಡ ಮತ್ತು ಕುಂದಾಪುರ ಭಾಗದಲ್ಲಿಯೂ ನಡೆಯಿತು. ಪ್ರತಿಭಟನೆ ಏಕಾಏಕಿ ವಿಧ್ವಂಸಕ ರೂಪವನ್ನು ಪಡೆದುಕೊಂಡಿತು. ಸಂಪರ್ಕ ವ್ಯವಸ್ಥೆಯನ್ನು



ಅಸ್ತವ್ಯಸ್ತಗೊಳಿಸಲಾಯಿತು. ಕೆಲವು ಕಡೆ ಅಧಿಕಾರಿಗಳು ಓಡಾಡುವ ಸೇತುವೆಗಳನ್ನು ಮುರಿದು ಹಾಕಲಾಯಿತು. ಚಳವಳಿಕಾರರು ಟಪ್ಪಾಲನ್ನು ಹೊತ್ತ ವಾಹನಗಳನ್ನು ತಡೆದರು, ಟೆಲಿಗ್ರಾಫ್ ತಂತಿಗಳನ್ನು ಮುರಿದುಹಾಕಿದರು. ಪೊಲೀಸರು ಪ್ರತಿಭಟನಕಾರರನ್ನು ಅಟ್ಟಾಡಿಸಿಕೊಂಡು ಹೊಡೆದರು, ಬಂಧಿಸಿದರು, ಹಿಂಸೆ ನೀಡಿದರು. ಅದ್ಯಾವುದಕ್ಕೂ ಪ್ರತಿಭಟನಕಾರರು ಬಗ್ಗಲಿಲ್ಲ. ಹೋಬಳಿಗಳಿಗೆ, ಹಳ್ಳಿಹಳ್ಳಿಗಳಿಗೆ ಚಳವಳಿ ಕಾಡ್ಗಿಚ್ಚಿನಂತೆ ಹಬ್ಬತೊಡಗಿತ್ತು. ಪ್ರತಿಭಟನೆಗೆ ಅಂಕುಶ ಹಾಕಲು ಪೊಲೀಸರಿಗೆ ಸಾಧ್ಯವೇ ಆಗಲಿಲ್ಲ. ಅಲ್ಲಲ್ಲಿ ಪಿಕೆಟಿಂಗ್‌ಗಳು ನಡೆದವು. ಕುಂದಾಪುರ, ಬಸರೂರು, ಬೈಂದೂರು, ಗಂಗೊಳ್ಳಿ, ಕೋಟೇಶ್ವರಗಳಲ್ಲಿ ನಿರಂತರ ಪಿಕೆಟಿಂಗ್‌ಗಳು ನಡೆಯುತ್ತಿದ್ದವು. ಹಾಗೆ ಪಿಕೆಟಿಂಗ್ ಮಾಡಿದವರು ದೂರವಾಣಿ ತಂತಿಯನ್ನು ಕಿತ್ತೆಸೆಯುತ್ತಿದ್ದರು, ಬಸ್ ಸಂಚಾರಕ್ಕೆ ಅಡ್ಡಿ ಮಾಡುತ್ತಿದ್ದರು. ಪೊಲೀಸರ ಲಾಠಿ ಪ್ರಹಾರಕ್ಕೆ ಯಾರೂ ಕ್ಯಾರೇ ಅನ್ನುತ್ತಿರಲಿಲ್ಲ. ಈ ರೀತಿಯ ರಾಷ್ಟ್ರೀಯ ಪ್ರಜ್ಞೆ, ದೇಶಸೇವೆಯ ಅಲೆಯಲ್ಲಿ ಅವರೆಲ್ಲ ಕೊಚ್ಚಿ ಹೋಗಿದ್ದರು.

### ತನಗೆ ತಾನೇ ಮಾರ್ಗದರ್ಶಿ ಎಂಬ ನಡೆ

ಊರು, ಪಟ್ಟಣ, ಹೋಬಳಿಗಳಲ್ಲಿ ಪೊಲೀಸರು ಎಷ್ಟೇ ಪಹರೆಗಳನ್ನು ನಡೆಸುತ್ತಿದ್ದರೂ ಕೂಡ ಅಲ್ಲಿ ಇದ್ದಕ್ಕಿದ್ದಂತೆ ಒಂದು ಪ್ರತಿಭಟನೆ ಹುಟ್ಟಿಕೊಳ್ಳುತ್ತಿತ್ತು. 'ಭಾರತಕ್ಕೆ ಸ್ವಾತಂತ್ರ್ಯ ದಕ್ಕಬೇಕಾದರೆ ಪ್ರತಿಯೊಬ್ಬರೂ ತನಗೆ ತಾನು ಮಾರ್ಗದರ್ಶಿಯಾಗಬೇಕು. ಹಾಗಿದ್ದರೆ ಮಾತ್ರ ಪಾರತಂತ್ರ್ಯದಿಂದ ಬಿಡುಗಡೆ ಸಾಧ್ಯವಾಗುತ್ತದೆ' ಎಂಬ ಗಾಂಧಿ ಮಾತನ್ನು ಜನ ಅಕ್ಷರಶಃ ಜಾರಿಗೆ ತರುತ್ತಿದ್ದುದಕ್ಕೆ ಈ ಎಲ್ಲ ಪ್ರತಿಭಟನೆಗಳು ಮಾದರಿಯಾಗಿದ್ದವು. ಬಸರೂರಿನಿಂದ ಆರಂಭಿಸಿ ಬೈಂದೂರು ತುದಿಯ ತನಕವೂ ನೂರಾರು ಮಂದಿ ದಿಟ್ಟ ನಾಯಕರಿದ್ದರು. ಬಸರೂರು ಗೋಪಾಲಕೃಷ್ಣ ಶೆಣೈ, ಸೂರಪ್ಪ ಶೆಟ್ಟಿ, ಸದಾಶಿವ ದೇವಾಡಿಗ, ಕೋಣಿ ಅಣ್ಣಪ್ಪ ಕಾರಂತ, ಹಾಲಾಡಿ ಶೀನಪ್ಪ ಶೆಟ್ಟಿ, ಪಾಂಗಾಳ ವಾಸುದೇವ ರಾವ್, ಪಾದ್ರಿಗುಡ್ಡೆ ಶಾನುಭೋಗರು, ಮೊಳಹಳ್ಳಿ ಮಹಾಬಲ ಶೆಟ್ಟಿ, ನಗರ ವೇಣುಗೋಪಾಲ ನಾಯಕ್, ಟೈಲರ್ ಕುಷ್ಟ, ಗಾಂಧಿ ರಾಮಣ್ಣ ಶೆಟ್ಟಿ, ಕಳಂಜೆ ರಾಮಕೃಷ್ಣ ಭಟ್ಟ, ಹಲ್ಸನಾಡು ಸೂರಪ್ಪಯ್ಯ, ಸೈಕಲ್ ರಾಘವೇಂದ್ರ ಶೆಣೈ,

ವಂದೇ ಮಾತರಂ ನಾರಾಯಣ ಮಾಸ್ತರ್ ಹೀಗೆ ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿ ಮುಂದುವರಿಯುತ್ತದೆ.

ಕುಂದಾಪುರದ ಕಡಲ ತೀರದಿಂದ ಘಟ್ಟದ ಸೆರಗಿನ ತನಕ ವ್ಯಾಪಿಸಿದ್ದ ಕುಂದಾಪುರ ತಾಲೂಕಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇದ್ದವರು ಜಮೀನ್ದಾರರು. ಇವರೆಲ್ಲರೂ ಸಿರಿವಂತರೂ, ದರ್ಪ ದೌಲತ್ತಿನವರೂ ಆಗಿದ್ದರು. ಸಾಮಾನ್ಯವಾಗಿ ಜಮೀನ್ದಾರರು ಪ್ರಭುತ್ವದ ಪರವಾಗಿ ಇರುತ್ತಿದ್ದರು. ಪೊಲೀಸರನ್ನೂ ತಮ್ಮ ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಆದರೆ ಸ್ವಾತಂತ್ರ್ಯ ಚಳವಳಿಯ ಉದ್ದಕ್ಕೂ ಈ ಜಮೀನ್ದಾರರು ಬ್ರಿಟಿಷರ ವಿರುದ್ಧವಾಗಿ ಕೆಲಸ ಮಾಡುವುದೇ ನಮಗೆ ಢಾಳಾಗಿ ಕಾಣುತ್ತದೆ. ಈ ಜಮೀನ್ದಾರರಲ್ಲಿ ಬಂಟರೂ ಇದ್ದರು, ಬ್ರಾಹ್ಮಣರೂ ಇದ್ದರು. ಈ ಕುಟುಂಬಗಳಲ್ಲಿ ಹುಟ್ಟಿದ ಕಿರಿಯ ತಲೆಮಾರಿನ ಹುಡುಗರು ಕೂಡ ಸ್ವಾತಂತ್ರ್ಯ ಚಳವಳಿಯ ಹುಚ್ಚು ಮೈಗಂಟಿಸಿಕೊಂಡಿದ್ದು ಅಚ್ಚರಿಯ ಸಂಗತಿ. ಅಂದರೆ ಸ್ವಾತಂತ್ರ್ಯ ಸಂಗ್ರಾಮ ಆಗಿನ ತಲೆಮಾರನ್ನು ಎಷ್ಟು ತೀವ್ರವಾಗಿ ಪ್ರಭಾವಿಸಿತ್ತು ಎಂಬುದು ಗಮನಾರ್ಹ.

ಕುಂದಾಪುರ ತಾಲೂಕನ್ನು ಭೌಗೋಳಿಕವಾಗಿ ನೋಡಿದರೆ ಇಲ್ಲಿ ಸಂಪರ್ಕ ವ್ಯವಸ್ಥೆ ಎನ್ನುವುದೇ ಇರಲಿಲ್ಲ. ನದಿ, ಸಮುದ್ರ, ಗುಡ್ಡ ಪ್ರದೇಶಗಳು ಇವೆಲ್ಲವನ್ನೂ ದಾಟಿ ಬಂದು ಜನ ಒಂದು ಕಡೆ ಸೇರಬೇಕಾಗಿತ್ತು. ಒಬ್ಬರಿಗೊಬ್ಬರು ಸಂವಹನವೂ ಕಷ್ಟವಾಗಿದ್ದ ಕಾಲ. ಆ ತುದಿಯಿಂದ ಈ ತುದಿಗೆ ತಲುಪಬೇಕಿದ್ದರೆ ದಿನಗಳೇ ಬೇಕಾಗುತ್ತಿದ್ದವು. ಯಾವ ಸೇತುವೆಗಳೂ ಇಲ್ಲಿ ನಿರ್ಮಾಣವಾಗಿರಲಿಲ್ಲ. ದೋಣಿಗಳ ಮೂಲಕ ಬರಬೇಕಾಗಿತ್ತು. ಕೆಲವರು ತಾವೇ ದೋಣಿಗೆ ಹುಟ್ಟುಹಾಕಿಕೊಂಡು ಬರಬೇಕಾದ ಸ್ಥಿತಿ. ಕರಾವಳಿ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರಂತೂ ಸಮುದ್ರ ತೀರದಲ್ಲಿಯೇ ಮರಳ ಮೇಲೆ ಉದ್ದಾನುದ್ದಕ್ಕೆ ಸಾಗಿ ಒಂದು ಊರಿನಿಂದ ಇನ್ನೊಂದು ಊರನ್ನು ತಲುಪುತ್ತಿದ್ದರು. ಉಡುಪಿ, ಮಂಗಳೂರನ್ನು ತಲುಪಬೇಕಿದ್ದರೂ ದಿನಗಳೇ ಬೇಕಾಗಿದ್ದವು. ಅನೇಕ ನದಿಗಳನ್ನು ದಾಟಬೇಕಾದ ಅನಿವಾರ್ಯ ಸ್ಥಿತಿಯಿತ್ತು. ವಾಹನಗಳ ಸೌಲಭ್ಯ ಹೊಂದಿದವರೂ ಕೂಡ ನದಿಯಲ್ಲಿ ದೋಣಿಗಳನ್ನು ಸೇರಿಸಿದ ಜಂಗಲ್ (ಅಟ್ಟಣಿಗೆ) ನಿರ್ಮಿಸಿ ಈ ತೀರದಿಂದ ಆ ತೀರವನ್ನು ತಲುಪಬೇಕಾಗಿತ್ತು. ಇಷ್ಟೆಲ್ಲ ಸಮಸ್ಯೆ, ಕಷ್ಟ–



ಕಾರ್ಪಣ್ಯಗಳಿದ್ದರೂ ಕೂಡ ಜನ, ಜಿಲ್ಲೆಯ ಇನ್ನೊಂದು ದಿಕ್ಕಿನಲ್ಲಿ ಉಪ್ಪಿನ ಸತ್ಯಾಗ್ರಹ ಶುರುವಾಯಿತು ಎಂದರೆ ಸಾಕು ಶತಾಯಗತಾಯ ಮಂಗಳೂರು ತಲುಪುತ್ತಿದ್ದರು. ಅಲ್ಲಿ ಹೋರಾಟದ ಸಾಗರದಲ್ಲಿ ತಾವೂ ಧುಮುಕುತ್ತಿದ್ದರು. ಈ ಎಲ್ಲ ಕಾರಣಗಳಿಂದ ಕುಂದಾಪುರ ತಾಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿಕೊಂಡಿದ್ದು ವಿಳಂಬವಾದರೂ ಕೂಡ ಅದು ವ್ಯಾಪಿಸಿಕೊಂಡ ಪರಿ ಮಾತ್ರ ಅನನ್ಯ. ಪಶ್ಚಿಮ ಘಟ್ಟದ ಬೆಟ್ಟದ ಸೆರಗಿನಿಂದ ಹಿಡಿದು ಈ ಕಡೆಯ ನದಿ ತೀರ, ಸಮುದ್ರ ತೀರದ ತನಕ ಜನ ನೋಡನೋಡುತ್ತಲೇ ಒಗ್ಗಟ್ಟನ್ನು ಮೆರೆದರು. ಗಾಂಧಿಯ ಪ್ರಭಾವಕ್ಕೆ ಒಳಗಾದರು. ಗಾಂಧಿ ಹೇಳಿದ ಮಾತನ್ನು ಚಾಚೂ ತಪ್ಪದೇ ಪಾಲಿಸಿದರು. ನಮ್ಮೂರಿಗೂ ಬನ್ನಿ, ನಮ್ಮೊಂದಿಗೆ ಮಾತನಾಡಿ, ನಮ್ಮನ್ನು ಹುರಿದುಂಬಿಸಿ ಎಂದು ಗಾಂಧಿಯನ್ನೂ, ನೆಹರೂ ಅವರನ್ನೂ ಕರೆಸಿದರು. ಎಂಥಾ ಕಷ್ಟವಿದ್ದರೂ ಕೂಡ ಸ್ವಾತಂತ್ರ್ಯ ಹೋರಾಟದ ಪ್ರತಿ ಹಂತದಲ್ಲಿಯೂ ಸಾಥ್ ನೀಡಿದರು. ಚಳವಳಿ, ಪ್ರತಿಭಟನೆ, ಸತ್ಯಾಗ್ರಹಗಳ ಮೂಲಕ ಬ್ರಿಟಿಷರ ಕೊರಳಿಗೆ ಸುತ್ತಿದ ಕುಣಿಕೆಯನ್ನು ದಿನ ದಿನವೂ, ಕ್ಷಣಕ್ಷಣವೂ ಬಿಗಿಮಾಡುವಲ್ಲಿ ತಮ್ಮ ಕಾಣಿಕೆಯೂ ಇದೆ ಎಂದು ಸಾರುವಲ್ಲಿ ಯಶಸ್ವಿಯಾದರು. 'ಪರಿವರ್ತನೆ' ಎನ್ನುವುದು ಜನರ ಹೃದಯದಲ್ಲಿಯೇ ಹುಟ್ಟುವ ಬೀಜ ಎನ್ನುವುದನ್ನು ಸಾಬೀತು ಮಾಡುವಲ್ಲಿ ಕುಂದಾಪುರದ ಜನರ ಪಾಲು ಬಲು ದೊಡ್ಡದು.

ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಈ ನೆಲದಲ್ಲಿ ಪಾದಸ್ಪರ್ಶ ಮಾಡಿದ ಬ್ರಿಟಿಷ್ ಸರ್ಕಾರವು ಪೆಡಂಭೂತವಾಗಿ ಬೆಳೆದ ಪರಿಯೂ ಅಸಾಧಾರಣವಾದುದು. ಅದರ ಕಠಿಣಾತಿಕಠಿಣ ನೀತಿಗಳು, ಪ್ರಬಲವಾದ ಸೈನಿಕ ವ್ಯವಸ್ಥೆ, ತಂತ್ರ–ಕುತಂತ್ರಗಳು, ಒಡೆದು ಆಳುವ ನೀತಿ, ಜನರನ್ನೇ ಹೊಸಕಿ ಹಾಕುವ ದುಷ್ಟತನ... ಎಲ್ಲದಕ್ಕೂ ಈ ನೆಲ ಸಾಕ್ಷಿಯಾಯಿತು. ಆದರೆ ಈ ಎಲ್ಲ ದುಷ್ಟತನಗಳ, ದಮನಕಾರಿ ಪ್ರವೃತ್ತಿಗಳ ವಿರುದ್ಧ ಜನ ತಳಮಟ್ಟದಿಂದ ಸಂಘಟಿತರಾದ ರೀತಿಗೆ ಅಂತಹ ದೈತ್ಯ ಬ್ರಿಟಿಷ್ ಬಲವೇ ಶರಣಾಗಬೇಕಾಯಿತು. ವೈರಿಯನ್ನು 'ಹೆಡೆಮುರಿ ಕಟ್ಟಲು' ನಿಂತ ಜನ ಯಾವುದಕ್ಕೂ ಅಂಜಲಿಲ್ಲ, ಅಳುಕಲಿಲ್ಲ. 'ಪ್ರಜಾಪ್ರಭುತ್ವ'ದ ಧೀಶಕ್ತಿಯೇ ಅಂತಹುದು. ಅದಕ್ಕೆ ಕುಂದಾಪುರದಂತಹ ಸಣ್ಣ ಊರು ಕೂಡ ಹೊರತಾಗಿರಲಿಲ್ಲ.

ಇನ್ನೊಂದು ದಿಕ್ಕಿನಲ್ಲಿ ಎರಡನೇ ಜಾಗತಿಕ ಯುದ್ಧವು ಫೈಸಲ್ ಆಗಿ ಜರ್ಮನಿ ಮತ್ತು ಜಪಾನ್ ಶರಣಾಗುವ ಹೊತ್ತಿಗೆ ಇಂಗ್ಲೆಂಡ್ ಹೈರಾಣಾಗಿ ಹೋಗಿತ್ತು. ಅದೇ ಸಮಯದಲ್ಲಿ ಇಂಗ್ಲೆಂಡ್‌ನಲ್ಲಿ ಚುನಾವಣೆ ನಡೆದು ಅಧಿಕಾರಕ್ಕೆ ಬಂದಿದ್ದ ಲೇಬರ್ ಪಕ್ಷಕ್ಕೆ ಎಲ್ಲ ಜಂಜಡಗಳಿಂದ ಬಿಡುಗಡೆ ಬೇಕಾಗಿತ್ತು. ಅಧಿಕಾರ ಹಸ್ತಾಂತರದ ಎಲ್ಲ ಪ್ರಕ್ರಿಯೆಗಳು ಮುಗಿದು ೧೯೪೭ರ ಆಗಸ್ಟ್ ೧೫ರಂದು ಭಾರತವನ್ನು ಸ್ವತಂತ್ರ ರಾಷ್ಟ್ರ ಎಂದು ಘೋಷಿಸಿದಾಗ ಇಡೀ ರಾಷ್ಟ್ರ ಸಂಭ್ರಮಿಸಿದ ರೀತಿಗೆ ಪಾರವಿಲ್ಲ. ಕುಂದಾಪುರ, ಬಸರೂರು, ಬೈಂದೂರು, ಗಂಗೊಳ್ಳಿ... ಎಲ್ಲೆಲ್ಲೂ ತ್ರಿವರ್ಣ ಧ್ವಜಗಳು ಅರಳಿದವು. ಪೊಲೀಸರಿಂದ ತಿಂದ ಲಾಠಿಯೇಟಿನ ಲೆಕ್ಕವಿಡದೆ, ಜೈಲುಗಳ ಕತ್ತಲ ಕೋಣೆಯಲ್ಲಿ ಕಳೆದ ದಿನಗಳನ್ನು ಎಣಿಕೆ ಮಾಡದೇ, ನಿದ್ದೆಯಿಲ್ಲದೇ ಕಳೆದ ರಾತ್ರಿಗಳನ್ನು ಲೆಕ್ಕವಿಡದೇ ಅವಿರತವಾಗಿ ಶ್ರಮಿಸಿದ ಸತ್ಯಾಗ್ರಹಿಗಳ ಸಂಭ್ರಮಕ್ಕೆ ಮೇರೆ ಎಂಬುದಿರಲಿಲ್ಲ. 'ತನಗೆ ತಾನೇ ಮಾರ್ಗದರ್ಶಿಯಾಗಿ ಅರಳಿ ನಿಂತಾಗಲೇ ಮುಗಿಲು ಕಾಣುತ್ತದೆ' ಎಂಬ ಗಾಂಧಿ ಮಾತನ್ನು ನಂಬಿದವರಿಗೆ ದಕ್ಕಿದ ಮುಗಿಲು ಈ ಸ್ವಾತಂತ್ರ್ಯವಾಗಿತ್ತು.

❑

## ಅಧ್ಯಾಯ–೩

## ಕುಂಡೆಗೆ ಬರೆ ಬಿದ್ದರೂ ತೆರಿಗೆ ಕಟ್ಟೆವು!

ಉಪ್ಪಿನ ಸತ್ಯಾಗ್ರಹ ಮತ್ತು ಕರನಿರಾಕರಣೆ ಜನಸಾಮಾನ್ಯರ ಮನಸ್ಸಿನಲ್ಲಿ ಎಷ್ಟು ಹಾಸುಹೊಕ್ಕಾಗಿತ್ತು ಎಂಬುದಕ್ಕೆ ಕುಂದಾಪುರ ತಾಲೂಕಿನ ಉಪ್ಪಿನಕುದ್ರುವಿನಲ್ಲಿ ನಡೆದ ಒಂದು ಸ್ವಾರಸ್ಯಕರ ಘಟನೆಯನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಇದಕ್ಕೆ ಬಡತನವೂ ಒಂದು ಕಾರಣವಾಗಿತ್ತು ಎನ್ನುವುದು ಬೇರೆಯೇ ಮಾತು.

ಬ್ರಿಟಿಷರ ಆಡಳಿತದ ಅವಧಿಯಲ್ಲಿ ಉಪ್ಪಿನಕುದ್ರುವಿನ ಜನ ಬೆಳೆಯುತ್ತಿದ್ದ ಬೆಳೆಯ ಅರ್ಧಾಂಶವನ್ನು ತೆರಿಗೆಯ ರೂಪದಲ್ಲಿ ಕಟ್ಟಬೇಕಾಗಿತ್ತು. ಈ ತೆರಿಗೆ ನೀತಿಯಿಂದ ಜನ ಕಂಗೆಟ್ಟಿದ್ದರು. ಬೆಳೆದ ಅರ್ಧ ಭಾಗವನ್ನು ತೆರಿಗೆ ಕಟ್ಟಿದರೆ ಹೊಟ್ಟೆಗೆ ಏನು ತಿನ್ನುವುದು ಎನ್ನುವುದು ಅವರ ಪ್ರಶ್ನೆಯಾಗಿತ್ತು. ಆಗಿನ ಕಾಲದಲ್ಲಿ ಒಂದು ಅಕ್ಕಿಮುಡಿಗೆ ಸಿಗುತ್ತಿದ್ದುದು ಎರಡು ರೂಪಾಯಿ ಮಾತ್ರ. ಅದರಲ್ಲಿ ಒಂದು ರೂ. ತೆರಿಗೆ ಕಟ್ಟದೇ ಹೋದರೆ ಬ್ರಿಟಿಷರು ವಿಧಿಸುತ್ತಿದ್ದ ಶಿಕ್ಷೆ ಏನೆಂದರೆ ಬೆಂಕಿಯಲ್ಲಿ ಕಾದ ಕಬ್ಬಿಣದ ಸಲಾಕೆಯಿಂದ ಕುಂಡೆಗೆ ಬರೆ!

ಕುಂಡೆಗೆ ಬರೆ ಹಾಕಿಸಿಕೊಂಡರೆ ತೆರಿಗೆಯಿಂದ ತಪ್ಪಿಸಿಕೊಳ್ಳಬಹುದಲ್ಲ? ಹೀಗೆ ಯೋಚನೆ ಮಾಡಿದ ಕುದ್ರುವಿನ ಜನ ತೆರಿಗೆ ಕಟ್ಟದೇ ಇರುವ ತೀರ್ಮಾನಕ್ಕೆ ಬಂದರು. ತೆರಿಗೆ ಸಂಗ್ರಹಿಸಲು ಬಂದಿದ್ದ ಬ್ರಿಟಿಷ್ ಅಧಿಕಾರಿಯ ಮುಂದೆ ರೈತರು ಸಾಲಾಗಿ ನಿಂತರು. ಅಷ್ಟೂ ಜನ ಒಂದು ಸಣ್ಣ ಪಾಣಿಪಂಚೆ (ಸೊಂಟಕ್ಕೆ ಕಟ್ಟಿಕೊಳ್ಳುವ ಬಟ್ಟೆ) ಮಾತ್ರ ಉಟ್ಟಿದ್ದರು. ತೆರಿಗೆ ಕಟ್ಟಿ ಎಂದು ಅಧಿಕಾರಿ

ಆದೇಶ ಮಾಡಿದ. ತೆರಿಗೆಗೆ ನಮ್ಮ ಬಳಿ ಕಾಸಿಲ್ಲ ಎಂದಾಗ ಬ್ರಿಟಿಷರ ಕಟ್ಟಪ್ಪಣೆಯಂತೆ ಕುಂಡೆಗೆ ಬರೆ ಹಾಕಿಸಿಕೊಳ್ಳಲು ಸಾಲಾಗಿ ನಿಂತೇಬಿಟ್ಟರು. ಸರಿ, ಇನ್ನೇನು ಕಾದ ಕಬ್ಬಿಣದ ಸರಿಗೆಯಿಂದ ಬರೆ ಹಾಕಬೇಕು ಅನ್ನುವಾಗ ಯಾವ ನಾಚಿಕೆಯೂ ಇಲ್ಲದೇ ಎಲ್ಲರೂ ಸರಕ್ಕನೆ ಉಟ್ಟ ಪಾಣಿಪಂಚೆಯನ್ನು ಮೇಲಕ್ಕೆತ್ತಿದರಂತೆ.

ಇದರಿಂದ ಅವಾಕ್ಕಾದ ಅಧಿಕಾರಿ ಕಾರಣ ಕೇಳಿದನಂತೆ. ಅದಕ್ಕೆ ರೈತರು ಕೊಟ್ಟ ಉತ್ತರ ಹೀಗಿತ್ತು; "ನಮಗೆ ಪಾಣಿಪಂಚೇನೇ ಶ್ರೇಷ್ಠ. ಇದ್ರ್ ಮ್ಯಾಲೇ ನೀವ್ ಬರೆ ಹಾಕ್ರೆ ಇನ್ನೊಂದು ತಕ್ಕಂಬುಕೆ ನಮ್ಮಹತ್ರ ದುಡ್ಡಿಲ್ಲ. ಅಷ್ಟು ಬಡವ್ರು ನಾವು"


ಈ ಮಾತಿನಿಂದ ಬ್ರಿಟಿಷ್ ಅಧಿಕಾರಿಯ ಮನಸ್ಸು ಕರಗಿತು. ಅಂದಿನಿಂದ ಬರೆ ಎಳೆಯುವ ಶಿಕ್ಷೆಯನ್ನು ರದ್ದುಪಡಿಸಿದ್ದು ಮಾತ್ರವಲ್ಲದೆ ತೆರಿಗೆಯನ್ನು ರದ್ದು ಮಾಡಿದನಂತೆ. ಹಾಗಾಗಿ ಉಪ್ಪಿನಕುದ್ರುವಿನಲ್ಲಿ 'ಕುಂಡೆ ಸುಟ್ಟರೂ ಅಡ್ಡಿಲ್ಲೆ, ಪಾಣಿ ಪಂಚೆ ಸುಡೂಕ್ ಆಗ!' ಎಂಬ ಮಾತು ಈಗಲೂ ಚಾಲ್ತಿಯಲ್ಲಿದೆ.

**ಈ ದೇಶಕ್ಕೆ ಸ್ವಾತಂತ್ರ್ಯ ತರುವ ತನಕ ನಾವು ವಿರಮಿಸಲಾರೆವು ಎಂದು ಅಖಾಡಕ್ಕೆ ಇಳಿದವರನ್ನು ಲೆಕ್ಕವಿಡಲು ಸಾಧ್ಯವಿಲ್ಲ. ಹೋರಾಟದ ಹುಚ್ಚನ್ನು ತಲೆಗೆ ತುಂಬಿಕೊಂಡು ಅಂದು ಅವರೆಲ್ಲರೂ ಪ್ರಭುತ್ವಕ್ಕೆ ಸೆಡ್ಡು ಹೊಡೆದು ನಿಂತಿದ್ದರಿಂದಲೇ ನಾವೆಲ್ಲ ಇಂದು ಸ್ವತಂತ್ರವಾಗಿ ನಿಂತಿದ್ದೇವೆ. ಅವರ ಆ ಹೋರಾಟವೇ ನಮ್ಮ ಮುಂದಿನ ತಲೆಮಾರುಗಳನ್ನು ಕಾದಿವೆ ಎಂದರೆ ತಪ್ಪಲ್ಲ. ಕಾಲದೊಂದಿಗೆ ಲೀನರಾದ ಅಂತಹ ಮಹನೀಯರೆಲ್ಲರೂ ಪ್ರಾತಃಸ್ಮರಣೀಯರು. ಕುಂದಾಪುರ–ಬಸರೂರು ಭಾಗದ ಸತ್ಯಾಗ್ರಹಿಗಳ ತ್ಯಾಗವೂ ಕೂಡ ಅನುಪಮವಾದುದು. ಅವರನ್ನು ಸ್ಮರಿಸುವುದು ನಮ್ಮ ಪಾಲಿನ ಅಭಿಮಾನ.**

❑

## ಅಧ್ಯಾಯ–೪
## ಜನಜಾಗೃತಿಗೆ ಪ್ರೇರಕಶಕ್ತಿಯಾದ ಕೃಷ್ಣರಾಯ ಕೊಡ್ಗಿ

"ನಮ್ಮದೇ ನೆಲದ ನೀರಿನಿಂದ ನಾವೇ ತಯಾರಿಸಿದ ಉಪ್ಪನ್ನು ಮಾರಾಟ ಮಾಡಲು ನಿಷೇಧವೇ?" ಪರಂಗಿ ಸರ್ಕಾರದ ನಿಲುವು ದೇಶದ ಜನರನ್ನು ಕೆರಳಿಸಿತ್ತು. ಗಾಂಧೀಜಿ ಉಪ್ಪಿನ ಕಾಯಿದೆಯನ್ನೇ ಉಲ್ಲಂಘಿಸಿ ಸತ್ಯಾಗ್ರಹವನ್ನು ಯಾವಾಗ ಆರಂಭಿಸಿದರೋ ಅದು ದೇಶಾದ್ಯಂತ ವ್ಯಾಪಿಸಲು ಬಹಳ ಕಾಲ ಬೇಕಾಗಲಿಲ್ಲ. ಕುಂದಾಪುರದಲ್ಲಿ ಅಂತಹ ಉಪ್ಪಿನ ಸತ್ಯಾಗ್ರಹದ ನೇತೃತ್ವ ವಹಿಸಿದ್ದವರಲ್ಲಿ ಅಮಾಸೇಬೈಲಿನ ಕೃಷ್ಣರಾಯ ಕೊಡ್ಗಿ ಮತ್ತು ಕೋಣಿ ಅಣ್ಣಪ್ಪ ಕಾರಂತರು ಮೊದಲಿಗರು. ಯಾಕೆಂದರೆ ನದಿ, ಸಮುದ್ರದ ನಡುವಿನಲ್ಲಿಯೇ ಜೀವನವನ್ನು ಕಟ್ಟಿಕೊಂಡವರಿಗೆ ಅದರ ಮಹತ್ವ ಬಹುಬೇಗ ಅರ್ಥವಾಗುತ್ತದೆ. ನಾಯಕರಿಗೆ ಜನಜಾಗೃತಿಯನ್ನು ಮೂಡಿಸುವುದು ಕೂಡ ಕಷ್ಟವಾಗಲಿಲ್ಲ.



ಕೃಷ್ಣರಾಯ ಕೊಡ್ಗಿ

೧೯೨೦ರ ಮಾತು. ಕೋಟ ಶಿವರಾಮ ಕಾರಂತರು ಆಗಿನ್ನೂ ಉತ್ಸಾಹಿ ಯುವ ಸಾಹಿತಿ. ಆಗಲೇ ಅವರು ಜನರನ್ನು ಸಂಘಟಿಸುವ ಕಾರ್ಯಕ್ಕೆ ಧುಮುಕಿದ್ದರು. ಕುಂದಾಪುರ, ಸಾಲಿಗ್ರಾಮ, ಕೋಟ ಮುಂತಾದ ಭಾಗದ ನೂರಾರು ಹಳ್ಳಿಗಳಿಗೆ ಪಾದಯಾತ್ರೆ ಕೈಗೊಂಡು ಸ್ವಾತಂತ್ರ್ಯ ಹೋರಾಟದ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಮಾಡಿದರು. ಆಗ ಅವರಿಗೆ ಪ್ರೇರಕಶಕ್ತಿಯಾಗಿ ಸಾಥ್ ನೀಡಿದವರೆಂದರೆ ಕೃಷ್ಣರಾಯ ಕೊಡ್ಗಿಯವರು.

ಉಪ್ಪಿನ ಸತ್ಯಾಗ್ರಹ ಕರಾವಳಿ ಪ್ರದೇಶದಲ್ಲಿ ಮಿಂಚಿನಂತೆ ವ್ಯಾಪಿಸುತ್ತಿದ್ದಾಗ ಕುಂದಾಪುರದಲ್ಲಿ ಅದಕ್ಕೊಂದು ದಿಕ್ಕು ತೋರಿಸಿ ಜನಾಂದೋಲನವಾಗಿ ರೂಪಿಸಲು ಒಬ್ಬ ದಿಟ್ಟ ನಾಯಕನ ಅಗತ್ಯವಿತ್ತು. ಹಿಂದುಳಿದ, ಯಾವುದೇ ಸಂಪರ್ಕದ ವ್ಯವಸ್ಥೆ ಇಲ್ಲದ ಕುಂದಾಪುರದ ಗ್ರಾಮೀಣ ಭಾಗಗಳಿಂದಲೂ ಜನರನ್ನು ಸಂಘಟಿಸುವಂತೆ ಮಾಡುವುದು ದುಸ್ತರ ಕೆಲಸವಾಗಿತ್ತು. ಗಾಂಧಿ ತತ್ತ್ವಕ್ಕೆ ಅನುಗುಣವಾಗಿ ಜನರ ಮನವೊಲಿಕೆ ಮಾಡುವ ಕೆಲಸದಲ್ಲಿ ಕೊಡ್ಗಿಯವರು ಮುಂದಾಳತ್ವ ವಹಿಸಿಕೊಂಡರು. ಹೀಗೆ ಚಳವಳಿಕಾರರು ತಯಾರಿಸಿದ ಉಪ್ಪನ್ನು ಕೊಡ್ಗಿಯವರ ಪತ್ನಿ ರಾಜಮ್ಮ ಅವರೇ ಪಟ್ಟಣದಲ್ಲಿ ಮಾರಿದ್ದು ವಿಶೇಷವಾಗಿತ್ತು. ಇದು ಕುಂದಾಪುರ ಭಾಗದ ಮಹಿಳೆಯರು ಕೂಡ ಚಳವಳಿಯಲ್ಲಿ ಭಾಗವಹಿಸಲು ಪ್ರೇರಣೆಯಾಗಿದ್ದು ನಿಜ.

ಸುಮಾರು ಆರು ತಿಂಗಳುಗಳ ಸೆರಮನೆ ವಾಸ ಅನುಭವಿಸಿದ ಅವರು ಜೈಲಿನಲ್ಲಿ ಇದ್ದುಕೊಂಡೇ ೧೯೩೨ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮಂಡಳಿ ಚುನಾವಣೆಗೆ ಸ್ಪರ್ಧಿಸಿ ವಿಜಯಿಯಾದರು. ಆಗಿನ ಕಾಲದಲ್ಲಿ ಅದೊಂದು ದಾಖಲೆಯೇ ಸರಿ. ಬೋರ್ಡಿನ ಸದಸ್ಯರಾಗಿ ಆಯ್ಕೆಯಾದ ಬಳಿಕ ಅವರು ಹರಿಜನೋದ್ಧಾರ ಸೇರಿದಂತೆ ಅನೇಕ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪರಿವರ್ತನೆಯ ಪರ್ವಕ್ಕೆ ನಾಂದಿ ಹಾಡಿದರು. ಜೊತೆಗೆ ಬಸರೂರು ಮತ್ತು ಕುಂದಾಪುರದಲ್ಲಿ ಸ್ವಾತಂತ್ರ್ಯ ಯೋಧರ ದೊಡ್ಡ ದಂಡನ್ನೇ ಸಿದ್ಧಪಡಿಸುವಲ್ಲಿ ಕೃಷ್ಣರಾಯ ಕೊಡ್ಗಿಯವರ ಕೊಡುಗೆ ದೊಡ್ಡದು.

❑


## ಅಧ್ಯಾಯ–೫

# ನ್ಯಾಷನಲ್ ಆರ್ಮಿಯಲ್ಲಿ ಕ್ಯಾಪ್ಟನ್ ಆಗಿದ್ದ ಕಾಮತ್

### ಕುಂಭಾಸಿ ನರಸಿಂಹ ಬಾಬಣ್ಣ ಕಾಮತ್

ಒಂದು ಸಾದಾ ಸಾದಾ ಕಚ್ಚೆ ಪಂಚೆ, ಬಿಳಿ ಖಾದಿ ಜುಬ್ಬಾ, ಗಾಂಧಿ ಟೋಪಿ, ಕಾಲಿಗೊಂದು ಚಪ್ಪಲಿಯನ್ನೂ ತೊಡದೇ ಬರಿಗಾಲ ನಡಿಗೆ ಮತ್ತು ಸರಳಾತಿ ಸರಳ ಜೀವನ. ಇವರು ಕುಂಭಾಸಿ ನರಸಿಂಹ ಬಾಬಣ್ಣ ಕಾಮತ್.

ಬಾಲ್ಯದಲ್ಲಿಯೇ ದೇಶಪ್ರೇಮವನ್ನು ಹೃದಯದಲ್ಲಿ ಸ್ಥಾಪನೆ ಮಾಡಿಕೊಂಡವರು, ಕಣ್ಣಲ್ಲಿ ಗಾಂಧಿ ಆದರ್ಶವನ್ನೇ ತುಂಬಿಕೊಂಡವರು ಬಹುಶಃ



ಕೆ.ಎನ್.ರಾವ್

ಹೀಗೇ ಇದ್ದುಬಿಡುತ್ತಾರೆ ಅನಿಸುತ್ತದೆ. ಯಾವ ಹಮ್ಮು–ಬಿಮ್ಮು ಇಲ್ಲದೆ ನಿರ್ಲಿಪ್ತವಾಗಿ, ಸಂತನಂತೆ ಬದುಕಿಬಿಡುತ್ತಾರೆ. 'ಇಷ್ಟೊಂದು ಅನುಭವದ ಗಣಿ' ಎಂದರೂ ಶುದ್ಧಾತಿಶುದ್ಧ ನಗೆ ನಕ್ಕು ಸುಮ್ಮನಾಗುತ್ತಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಇವರಿಗಿಂತ ಆದರ್ಶಪುರುಷರು ಬೇಕೇ ಅನಿಸುತ್ತದೆ.

ಆರಂಭಿಕ ಶಿಕ್ಷಣವನ್ನು ಪಡೆಯುವುದೇ ದುಸ್ತರವಾದ ಹೊತ್ತಿನಲ್ಲಿ ವಾರಾನ್ನವನ್ನುಂಡು ಬೈಂದೂರು–ಕುಂದಾಪುರದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಶತಾಯಗತಾಯ ಮುಗಿಸಿ ಮಂಗಳೂರಿನ ಸಂತ ಅಲೋಷಿಯಸ್ ಕಾಲೇಜಿನಲ್ಲಿ ಸಸ್ಯಶಾಸ್ತ್ರದಲ್ಲಿ ಬಿ.ಎಸ್‌ಸಿ. ಪದವಿಯನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಾರೆ. ಇನ್ನೇನು ಕಾಲೇಜು ಶಿಕ್ಷಣ ಮುಗಿಯಿತು, ಮಗ ದುಡಿಯುವ ದಿನಗಳು ಸಮೀಪಿಸಿತು ಎಂದುಕೊಂಡ ಪಾಲಕರಿಗೆ ಆಘಾತ ಕಾದಿತ್ತು. ಮಗ ಹೊರಟು ನಿಂತಿದ್ದು ಗಾಂಧೀಜಿಯವರ ಸಾಬರಮತಿ ಆಶ್ರಮಕ್ಕೆ. ಅಲ್ಲಿ ಅವರು ಕಳೆದಿದ್ದು ಮೂರು ವರ್ಷ. ಗಾಂಧಿಯ ಮಾರ್ಗದರ್ಶನದಂತೆ ಊರಿಗೆ ಮರಳಿದ ಬಾಬಣ್ಣ ಕಾಮತ್ ಸಮರ್ಪಣಾಭಾವದಿಂದ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡರು.

ಅವರ ಪ್ರತಿಭಟನೆ ಒಂದು ರೀತಿಯಲ್ಲಿ ಸೀಮಾತೀತವಾಗಿತ್ತು. ದಕ್ಷಿಣ ಕನ್ನಡದಲ್ಲಿ ಅನೇಕ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ ಅವರು ಉತ್ತರ ಕನ್ನಡದ ಇನ್ನೊಂದು ತುದಿಯಲ್ಲೂ ಬ್ರಿಟಿಷ್ ಸರ್ಕಾರದ ವಿರುದ್ಧ ದನಿ ಎತ್ತುತ್ತಿದ್ದರು. ಕುಂದಾಪುರ ಮತ್ತು ಕೋಟೇಶ್ವರದಲ್ಲಿ ೧೯೩೦ರಲ್ಲಿ ಸಾರಾಯಿ ಅಂಗಡಿಯ ಮುಂದೆ ಪಿಕೆಟಿಂಗ್ ಹಾಗೂ ಕೃಷ್ಣರಾಯ ಕೊಡ್ಗಿ ಅವರ ಜೊತೆ ಸೇರಿ ಜಂಗಲ್‌ನಲ್ಲಿ ಸತ್ಯಾಗ್ರಹ ನಡೆಸಿದ ಕಾಮತ್ ಅವರನ್ನು ಬಂಧಿಸಲಾಗುತ್ತದೆ. ಕೆಲ ತಿಂಗಳು ಕಾಲ ತಣ್ಣಗೆ ಜೈಲುವಾಸ ಅನುಭವಿಸಿ ಬರುತ್ತಿದ್ದ ಕಾಮತರು ಬಂದ ತಕ್ಷಣವೇ ಮತ್ತೆ ಪ್ರತಿಭಟನೆಗೆ ಇಳಿಯುತ್ತಿದ್ದರು. ಕಾರ್ನಾಡ್ ಸದಾಶಿವರಾಯರು ಮಂಗಳೂರಿನಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸುತ್ತಿದ್ದಾರೆ ಎಂದರೆ ಸಾಕು ಒಂದು ಗಾಂಧಿ ಟೋಪಿ ಏರಿಸಿಕೊಂಡು ಅವರಿಗೆ ಸಾಥ್ ನೀಡುತ್ತಿದ್ದರು. ಪೊಲೀಸರ ಲಾಠಿಯೇಟಿಗೆ ಮೈಯೊಡ್ಡಿ ಮತ್ತೆ ಜೈಲು ಸೇರುತ್ತಿದ್ದರು. ಸರದಿ ಪ್ರಕಾರವಾಗಿ ಮಂಗಳೂರು, ಕಣ್ಣಾನೂರು, ಕುಂದಾಪುರ, ಬಳ್ಳಾರಿ, ಮುಂಬೈ ಜೈಲುಗಳಲ್ಲಿ ತಿಂಗಳುಗಳ ಸೆರವಾಸ ಅನುಭವಿಸಿದವರು.



ಹೀಗೆ ಬರೋಬ್ಬರಿ ಐದು ವರ್ಷಕ್ಕೂ ಹೆಚ್ಚು ಕಾಲ ಜೈಲು ಶಿಕ್ಷೆಗೆ ಒಳಗಾದವರ ಮೈ–ಮನಸ್ಸು ಹೇಗೆ ಮುಪ್ಪರಿಗಟ್ಟಿರಬಹುದು, ದೇಶಪ್ರೇಮಕ್ಕೆ ಅವರು ತಮ್ಮ ಜೀವನವನ್ನು ಯಾವ ಪರಿಯಲ್ಲಿ ಮುಡಿಪಾಗಿಟ್ಟಿರಬಹುದು ಎಂದು ಸಾಮಾನ್ಯರಿಗೆ ಯೋಚಿಸುವುದೂ ಕಷ್ಟ.

ಅಹಿಂಸೆಯಿಂದ ಮಾತ್ರ ಸ್ವಾತಂತ್ರ್ಯ ಗಳಿಸಲು ಸಾಧ್ಯವಿಲ್ಲ ಎಂದು ಬಲವಾಗಿ ನಂಬಿದ್ದ ಕಾಮತರು ಸೇನಾ ಅನುಭವವನ್ನು ಪಡೆದುಕೊಳ್ಳುವ ಸಲುವಾಗಿ ಬ್ರಿಟಿಷ್ ಸೇನೆಯನ್ನು ಸೇರಿಕೊಂಡರು. ಅಲ್ಲಿಯ ಅನುಭವದಿಂದ ಅವರು ಇನ್ನಷ್ಟು ಗಟ್ಟಿಯಾದರು. ಬಳಿಕ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ನ್ಯಾಷನಲ್ ಆರ್ಮಿಯಲ್ಲಿ ಕ್ಯಾಪ್ಟನ್ ಆಗಿ ಸೇರಿಕೊಂಡರು. ಸಿಂಗಾಪುರ, ಬರ್ಮಾ ಮುಂತಾದ ಕಡೆ ನಾಲ್ಕು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ಭಾರತ ಪಾರತಂತ್ರ್ಯದಿಂದ ಮುಕ್ತಿಯನ್ನು ಪಡೆದ ಬಳಿಕ ನೇಪಥ್ಯಕ್ಕೆ ಸರಿದ ನರಸಿಂಹ ಬಾಬಣ್ಣ ಕಾಮತ್ ಉತ್ತರ ಕನ್ನಡದ ಇನ್ನೊಂದು ತುದಿಯಾದ ದಾಂಡೇಲಿಯ ಅರಣ್ಯ ಇಲಾಖೆಯಲ್ಲಿ ಅಧಿಕಾರಿಯಾಗಿ ಕೆಲಸಕ್ಕೆ ಸೇರಿಕೊಂಡರು. ಹದಿಮೂರು ಭಾಷೆಗಳನ್ನು ಬಲ್ಲವರಾಗಿದ್ದ ಅವರು ಮುಂದೆ ಕೆ.ಎನ್.ರಾವ್ ದಾಂಡೇಲಿ ಹೆಸರಿನಲ್ಲಿ ಸಮಾಜಸೇವೆ, ಸಾಹಿತ್ಯ, ಪತ್ರಿಕೋದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಡಾ.ಟಿ.ಎಂ.ಎ.ಪೈ ಪ್ರತಿಷ್ಠಾನ ಪ್ರಶಸ್ತಿ, ಕುಂದಪ್ರಭ ಕೋ.ಮ.ಕಾರಂತ ಪ್ರಶಸ್ತಿ, ಭಾರತ ಸ್ವಾತಂತ್ರ್ಯ ಸ್ವರ್ಣ ಜಯಂತಿ ಪ್ರಶಸ್ತಿ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೂಲಕ ಸಮಾಜ ಅವರನ್ನು ಗೌರವಿಸಿದೆ. ಈ ದೇಶಕ್ಕೆ, ಈ ಸಮಾಜಕ್ಕೆ ನೀನು ಸೇವೆಯನ್ನು ಸಲ್ಲಿಸುತ್ತ ಹೋಗು, ಉಳಿದ ಯಾವುದನ್ನೂ ನಿರೀಕ್ಷಿಸದೇ ಜೀವನ ಸಾಗಿಸು ಎಂಬ ಚಿಂತನೆಯಲ್ಲಿ ನಂಬಿಕೆಯನ್ನಿಟ್ಟುಕೊಂಡ ಕೆ.ಎನ್.ರಾವ್ ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ನೆನಕೆಗೆ ಅರ್ಹರು.

❑

## ಅಧ್ಯಾಯ–೬
## ಬದುಕಿದ್ದು ೨೬ ವರ್ಷ, ಹೋರಾಟ ಅಸದಳ!

**ಹಲ್ಸನಾಡು ಸೂರಪ್ಪಯ್ಯ:** ಕೆಲವರು ಹೋರಾಟದ ಗುಣವನ್ನು ತಮ್ಮ ರಕ್ತದಲ್ಲೇ ಹೊಂದಿರುತ್ತಾರೆ. ಯಾವ ಭಾವನಾತ್ಮಕ ಸೆಳೆತಕ್ಕೂ ಅವರು ಒಳಗಾಗುವುದಿಲ್ಲ. ಅವರು ತಮ್ಮ ನಿರ್ಧಾರದಿಂದ ಒಂದಿನಿತೂ ಕದಲವುದಿಲ್ಲ. ವಿಚಲಿತರಾಗುವುದಿಲ್ಲ. ಈ ಸ್ವಾತಂತ್ರ್ಯ ಸಂಗ್ರಾಮ ಇಂತಹ ಅನೇಕ ಮಹನೀಯರರನ್ನು ನಮಗೆ ಕೊಟ್ಟಿದೆ. ಕುಂದಾಪುರ ಸುತ್ತಮುತ್ತಲಿನ ಹೋರಾಟಗಾರರ ಒಂದೊಂದು ಕಥೆಗಳೂ ಅವರಿಗಿದ್ದ ದಿಟ್ಟತನವನ್ನು ಅನಾವರಣಮಾಡುತ್ತವೆ. ಇಂತಹ ಹೋರಾಟದ ಸಾಲಿನಲ್ಲಿ ಎಲ್ಲರೂ ಸಮಾನ ಎತ್ತರದಲ್ಲಿ ನಿಲ್ಲುತ್ತಾರೆ.



**ಹಲಸ್‌ನಾಡ್ ಸೂರಪ್ಪಯ್ಯ**

ಅಪ್ಪಟ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಸೂರಪ್ಪಯ್ಯ ಬದುಕಿದ್ದ ಕೇವಲ ಇಪ್ಪತ್ತಾರೇ ವಯಸ್ಸಿನಲ್ಲಿ ಮಾಡಿದ ಸಾಧನೆ ಅಪ್ರತಿಮವಾದುದು. ಮಂಗಳೂರಿನಲ್ಲಿ ಇಂಟರ್‌ಮೀಡಿಯಟ್ ಪರೀಕ್ಷೆ ಮುಗಿದ ತಕ್ಷಣವೇ ಬ್ರಿಟಿಷರ ವಿರುದ್ಧ ಕರಪತ್ರ ಹಂಚುವುದು, ಯುವ ಸಮುದಾಯವನ್ನು ಉದ್ದೇಶಿಸಿ ಭಾಷಣ ಮಾಡುವುದು, ಅವರನ್ನು ಹೋರಾಟಕ್ಕೆ ಧುಮುಕುವಂತೆ ಹುರಿದುಂಬಿಸುವ ಕೆಲಸದಲ್ಲಿ ತೊಡಗಿಕೊಂಡರು. ಗಾಂಧಿ, ನೆಹರೂ, ಲಾಲಾ ಲಜಪತ್ ರಾಯ್, ಸುಭಾಷ್‌ಚಂದ್ರ ಬೋಸ್, ಭಗತ್ ಸಿಂಗ್ ಪ್ರಭಾವಕ್ಕೆ ಒಳಗಾಗಿದ್ದ ಸೂರಪ್ಪಯ್ಯ ಅವರ ಮೇಲೆ ಅಗಾಧವಾಗಿ ಪರಿಣಾಮ ಬೀರಿದ್ದು ಗಾಂಧಿ ಘೋಷಿಸಿದ ಉಪ್ಪಿನ ಸತ್ಯಾಗ್ರಹ. ೧೯೩೨ರಲ್ಲಿ ಉಪ್ಪಿನ ಕಾಯಿದೆಯನ್ನು ವಿರೋಧಿಸಿ ಉಪ್ಪಿನ ಸತ್ಯಾಗ್ರಹದ ಪರವಾಗಿ ಒಂದು ಪುಸ್ತಕವನ್ನು ಪ್ರಕಟಿಸಿದರು. ಇದೊಂದು 'ರಾಜದ್ರೋಹದ ಬರಹ' ಎಂದು ಪರಿಗಣಿಸಿದ ಬ್ರಿಟಿಷ್ ಸರ್ಕಾರ ಅವರನ್ನು ಬಂಧಿಸಿ ಒಂದೂವರೆ ವರ್ಷ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿತು.

ಜಾಮೀನು ಪಡೆದು ಬಂದ ಹದಿಹರೆಯದ ಮಗನನ್ನು 'ಇನ್ನು ಸಾಕು ಹೋರಾಟ' ಎಂದು ಅಪ್ಪ ಹಲ್ಸನಾಡು ಮಾದಪ್ಪಯ್ಯನವರು ಮನವರಿಕೆ ಮಾಡುವ ಪ್ರಯತ್ನಕ್ಕೆ ಯಾವ ಫಲವೂ ಸಿಗಲಿಲ್ಲ. ಕೆಲವೇ ದಿನಗಳಲ್ಲಿ ಮತ್ತೆ ಖಾದಿ ಬಟ್ಟೆಯನ್ನು ಧರಿಸಿ ಹೋರಾಟಕ್ಕೆ ಅಣಿಯಾಗಿಬಿಟ್ಟರು. ಈ ಹುಡುಗನ ಉತ್ಸಾಹವನ್ನು ಕಂಡ ಹಿರಿಯರು ೧೯೩೫ರಲ್ಲಿ ಮಂಗಳೂರಿನಲ್ಲಿ ನಡೆದ ೨ನೇ ಕರ್ನಾಟಕ ಪ್ರಾದೇಶಿಕ ರಾಜಕೀಯ ಪರಿಷತ್ತಿನ ಕಾರ್ಯದರ್ಶಿಯಾಗಿ ಆಯ್ಕೆಮಾಡಿದರು. ಕುಂದಾಪುರ ಸುತ್ತಮುತ್ತ ನಡೆದ ಅನೇಕ ಪ್ರತಿಭಟನೆ, ಚಳವಳಿಯಲ್ಲಿ ಮುಂಚೂಣಿಯಲ್ಲಿ ನಿಂತರು. ೧೯೩೭ರಲ್ಲಿ ಪ್ರಾಂತ ಸರ್ಕಾರಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಧರ್ಮಸ್ಥಳದ ಮಂಜಯ್ಯ ಹೆಗ್ಗಡೆ ಪರವಾಗಿ ಪ್ರಚಾರ ಮಾಡಿ ತಮ್ಮ ಸೋದರಮಾವ,

ಬ್ರಿಟಿಷರ ಪರವಾಗಿದ್ದ ಜಸ್ಟೀಸ್ ಪಕ್ಷದ ಸದಾಶಿವ ಅಡಿಗ ಅವರ ಸೋಲಿಗೆ ಪ್ರಮುಖ ಕಾರಣರಾಗುತ್ತಾರೆ. ಆ ಕಾಲದಲ್ಲಿಯೇ ತಮ್ಮೂರಿನಲ್ಲಿ ಬ್ಯಾಂಕ್ ಕಟ್ಟಬೇಕು ಎಂಬ ಕನಸು ಕಂಡ ಸೂರಪ್ಪಯ್ಯ 'ಕುಂದಾಪುರ ಬ್ಯಾಂಕ್' ಉದಯಕ್ಕೆ ಮುಖ್ಯ ಕಾರಣರಾಗುತ್ತಾರೆ. ಉಳ್ಳವರು ಯಾವತ್ತೂ ತಳವರ್ಗದವರಿಗಾಗಿ, ಇಲ್ಲದವರಿಗಾಗಿ ಕೆಲಸ ಮಾಡಬೇಕು ಎಂಬ ತತ್ವದಲ್ಲಿ ನಂಬಿಕೆ ಇಟ್ಟಿದ್ದ ಹುಡುಗ ಆಗಲೇ ಅನೇಕ ಸಾಮಾಜಿಕ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದರು. ೧೯೩೮ರಲ್ಲಿ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಾಗಲೇ ಪೊಲೀಸರ ಗುಂಡಿನೇಟಿಗೆ ಸಿಕ್ಕು ತಮ್ಮ ೨೬ನೇ ವಯಸ್ಸಿನಲ್ಲಿ ಸೂರಪ್ಪಯ್ಯ ಹುತಾತ್ಮರಾಗುತ್ತಾರೆ.

❑

## ಅಧ್ಯಾಯ-೭

## ಗಾಂಧಿ ಬೇಟಿಗೆ ಕರಾಚಿಗೆ ತೆರಳಿದ್ದ ರಾಮಣ್ಣ ಶೆಟ್ಟಿ

೧೯೩೧ರ ಮಾರ್ಚ್ ೨೬ರಿಂದ ೩೧ರ ತನಕ ಕರಾಚಿಯಲ್ಲಿ ಕಾಂಗ್ರೆಸ್ ಅಧಿವೇಶನ ನಿಗದಿಯಾದ ತಕ್ಷಣ ಆ ಅಧಿವೇಶನದಲ್ಲಿ ಭಾಗವಹಿಸಬೇಕು ಎಂಬ ಸಂಕಲ್ಪ ಕೈಗೊಳ್ಳುತ್ತಾರೆ ಕುಂದಾಪುರದ ಈ ಮೂಲೆಯಲ್ಲಿದ್ದ ರಾಮಣ್ಣ ಶೆಟ್ಟರು. ತಾವು ದೇವರೆಂದೇ ಪೂಜಿಸುತ್ತಿದ್ದ ಮಹಾತ್ಮ ಗಾಂಧಿ ಅವರನ್ನು ಭೇಟಿ ಮಾಡಬೇಕು ಎಂಬುದು ಅವರ ಜೀವನದ ಕನಸಾಗಿತ್ತು. ಅಲ್ಲಿ ನಡೆದ ಸಮಾವೇಶದಲ್ಲಿ ಎಲ್ಲರ ಕಣ್ಣುತಪ್ಪಿಸಿ ವೇದಿಕೆ ಹತ್ತಿದ ರಾಮಣ್ಣ ಶೆಟ್ಟರು ಗಾಂಧಿ ಅವರ ಪಾದಮುಟ್ಟಿ ನಮಸ್ಕರಿಸಿ ಆಶೀರ್ವಾದವನ್ನು ಪಡೆದುಕೊಳ್ಳುತ್ತಾರೆ. ಅಂದಿನಿಂದ ಕುಂದಾಪುರ ತಾಲೂಕಿನ ಬಳ್ಕೂರಿನ ಈ ಶೆಟ್ಟರು ಗಾಂಧಿ ರಾಮಣ್ಣ ಶೆಟ್ಟಿ ಎಂದೇ ಜನರಿಂದ ಕರೆಸಿಕೊಂಡರು.

ಗಾಂಧಿ ಅವರ ಮಾತನ್ನು ವೇದವಾಕ್ಯದಂತೆ ಪಾಲಿಸುತ್ತಿದ್ದ ಶೆಟ್ಟರು ದೇಶದ ಯಾವುದೇ ಮೂಲೆಯಲ್ಲಿ ಗಾಂಧಿ ಯಾವುದಾದರೂ ಕಾರ್ಯಕ್ರಮವನ್ನು ಘೋಷಿಸಿದರೆ ಅದನ್ನು ಕುಂದಾಪುರದಲ್ಲಿ ಜಾರಿಗೆ ತರುತ್ತಿದ್ದರು. ಗಾಂಧಿ ಉಪವಾಸ ಕುಳಿತರೆ ತಾವೂ ಉಪವಾಸ ಕುಳಿತುಬಿಡುತ್ತಿದ್ದರು. ಹರಿಜನೋದ್ಧಾರ ಮಾಡಬೇಕು ಎಂಬ ನುಡಿಯನ್ನು ಅಕ್ಷರಶಃ ಪಾಲಿಸಲು ಹರಿಜನ ಕೇರಿಗಳಿಗೆ ಭೇಟಿ ನೀಡುತ್ತಿದ್ದರು. ವಿದೇಶಿ ಬಟ್ಟೆಯನ್ನು ತ್ಯಜಿಸುವ ಸಲುವಾಗಿ ಸದಾ ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದರು.

ಗಾಂಧಿ ಮತ್ತು ನೆಹರೂ ಕುಂದಾಪುರಕ್ಕೆ ಭೇಟಿ ನೀಡಿದಾಗ ಸಾರ್ವಜನಿಕ

ಸಭೆಯನ್ನು ಸಂಘಟಿಸುವಲ್ಲಿ ಮುಂಚೂಣಿಯಲ್ಲಿ ನಿಂತ ರಾಮಣ್ಣ, ರಾಷ್ಟ್ರೀಯ ನಾಯಕರಿಂದ ಪ್ರಭಾವಿತರಾಗಿ ನಮ್ಮ ಮಾತೃಭೂಮಿಯನ್ನು ಪರಕೀಯರಿಂದ ಪಾರುಮಾಡಲು ನಮಗೆ ನಾವೇ ಮಾರ್ಗದರ್ಶಿಗಳಾಗಿ ಕಾರ್ಯೋನ್ಮುಖರಾಗಬೇಕು ಎಂಬ ಮಾತನ್ನು ಕಾರ್ಯರೂಪಕ್ಕೆ ತಂದವರು. ತಾಲೂಕಿನ ಯಾವ ಭಾಗದಲ್ಲಿ ಸತ್ಯಾಗ್ರಹ, ಚಳವಳಿಗಳಾದರೂ ಸ್ವಯಂಪ್ರೇರಿತರಾಗಿ ಭಾಗವಹಿಸುತ್ತಿದ್ದುದು ಮಾತ್ರವಲ್ಲದೆ ಜನರನ್ನು ಸಂಘಟಿಸುವಲ್ಲಿ ಸಿದ್ಧಹಸ್ತರಾಗಿದ್ದರು. ಎರಡನೇ ಜಾಗತಿಕ ಯುದ್ಧ ಸಂಭವಿಸಿದಾಗ ಬ್ರಿಟಿಷ್ ಸರಕಾರ ಯುದ್ಧನಿಧಿಯನ್ನು ಸಂಗ್ರಹಿಸಲು ಮುಂದಾದಾಗ ಅದನ್ನು ಪ್ರಬಲವಾಗಿ ವಿರೋಧಿಸಿ ಭಾರೀ ಪ್ರತಿಭಟನೆಯನ್ನು ಸಂಘಟಿಸಿದವರು.

"ಎಲ್ಲ ಯುದ್ಧಗಳನ್ನೂ ಅಹಿಂಸೆಯಿಂದಲೇ ಗೆಲ್ಲಬೇಕು. ಬ್ರಿಟಿಷರ ಈ ಯುದ್ಧಕ್ಕೆ ಜನರಿಂದ ಹಣ ಸಂಗ್ರಹಿಸುವುದು ಮಹಾಪಾಪ" ಎಂದು ಘೋಷಣೆಗಳನ್ನು ಕೂಗುತ್ತಾ ತಾಲೂಕಿನ ಹುಣ್ಸೆಮಕ್ಕಿ, ಹಾಲಾಡಿ, ಗುಲ್ವಾಡಿ, ಕೊಲ್ಲೂರು, ಬೈಂದೂರು ಮೂಲಕ ಸುಮಾರು ೩೩ ದಿನಗಳ ಕಾಲ ಪಾದಯಾತ್ರೆಯನ್ನು ನಡೆಸಿದರು. ಮುಂದೆ ಅವರನ್ನು ಭಟ್ಕಳದಲ್ಲಿ ಬಂಧಿಸಲಾಗುತ್ತದೆ. ಕುಮಟಾ ಕೋರ್ಟಿನಲ್ಲಿ ವಿಚಾರಣೆ ನಡೆದು ಆರು ತಿಂಗಳ ಕಠಿಣ ಸಜೆಯನ್ನು ವಿಧಿಸಲಾಗುತ್ತದೆ. ಯರವಾಡ ಮತ್ತು ಹಿಂಡಲಗಿ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸಿ ಬಂದ ಬಳಿಕವೂ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳುವುದನ್ನು ನಿಲ್ಲಿಸುವುದಿಲ್ಲ.

❑

## ಅಧ್ಯಾಯ–೮
## ಅನುಕ್ಷಣವೂ ದೇಶದ ಚಿಂತನೆಯ ವೀರ ವಿಠಲ ಪೈ

ಈ ದೇಶ ಬ್ರಿಟಿಷರ ದಾಸ್ಯದಿಂದ ನಿಶ್ಚಿತವಾಗಿ ಬಿಡುಗಡೆ ಹೊಂದಬೇಕು ಹಾಗಿದ್ದರೆ ಮಾತ್ರ ನಮ್ಮ ಮುಂದಿನ ತಲೆಮಾರಿಗೆ ಭವಿಷ್ಯವಿದೆ ಎಂಬ ದೂರದೃಷ್ಟಿಯನ್ನು ಅನೇಕ ಸ್ವಾತಂತ್ರ್ಯ ಹೋರಾಟಗಾರರು ಹೊಂದಿದ್ದರು. ಬಹುತೇಕರು ಇಂತಹ ಒಂದು ಚಿಂತನೆಯನ್ನು ಹೃದಯದಲ್ಲಿಯೇ ಸ್ಥಾಪಿಸಿಕೊಂಡಿದ್ದರು ಮತ್ತು ಅದನ್ನು ತಮ್ಮ ದಿನನಿತ್ಯದ, ಅನುಕ್ಷಣದ ಬದುಕಿನಲ್ಲಿ ಜಾರಿಗೆ ತರುತ್ತಿದ್ದರು ಎಂಬುದಕ್ಕೆ ವಿಠಲ ಪೈ ಅವರು ಸಾಕ್ಷಿಯಾಗಿ ನಿಲ್ಲುತ್ತಾರೆ. ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯ ಕೂಡ ಎಂತಹ ಕೊಡುಗೆಯನ್ನು ಕೊಡಬಹುದು ಹಾಗೂ ಜನಸಾಮಾನ್ಯರಲ್ಲಿ ಪರಿವರ್ತನೆಯನ್ನು ತರಬಹುದು ಎಂಬುದಕ್ಕೆ ಅವರು ಉತ್ತಮ ಉದಾಹರಣೆ.

ಕುಂದಾಪುರದ ಹೃದಯ ಭಾಗದಲ್ಲಿ ಮಾಸ್ತಿಕಟ್ಟೆ ಎಂಬ ಸ್ಥಳವಿದೆ. ಅನಾದಿ ಕಾಲದಿಂದಲೂ ಇದ್ದ ದೈವಸ್ಥಾನವದು. ಒಂದು ಅರಳಿಕಟ್ಟೆಯಲ್ಲಿ ಸ್ಥಾಪನೆಯಾಗಿರುವ ಮಾಸ್ತಿಯಮ್ಮನ ಸಣ್ಣ ಗುಡಿ. ಈಗಲೂ ಕುಂದಾಪುರದಲ್ಲಿ ಆ ಕಟ್ಟೆ ಮತ್ತು ಗುಡಿಯಿದೆ. ಈ ಮಾಸ್ತಿಕಟ್ಟೆ ಆಗಿನ ಕಾಲದಲ್ಲಿ ಅನೇಕ ಸ್ವಾತಂತ್ರ್ಯ ಹೋರಾಟಗಾರರ ನಿಲುದಾಣವಾಗಿತ್ತು. ಹೋರಾಟದ, ಸತ್ಯಾಗ್ರಹದ ರೂಪುರೇಷೆಗಳು ಅಲ್ಲಿಯೇ ನಿರ್ಧಾರವಾಗುತ್ತಿತ್ತು ಎಂದು ನಮ್ಮ ಹಿರಿಯರು ಹೇಳುತ್ತಿದ್ದರು. ಆ ಮಾಸ್ತಿಕಟ್ಟೆಯ ಪಕ್ಕದಲ್ಲಿಯೇ ಪುಟ್ಟದೊಂದು ಹೋಟೆಲ್ ಇಟ್ಟುಕೊಂಡವರು ವಿಠಲ ಪೈ. 'ಕಟ್ಟೆ'ಯಲ್ಲಿ ಪ್ರತಿ ದಿನವೂ ನಡೆಯುವ ಹೋರಾಟದ

ಚರ್ಚೆಗಳಿಗೆ ಪೈಯವರು ಕಿವಿಯಾಗುತ್ತಿದ್ದರು. ಅದರ ಪ್ರಭಾವಕ್ಕೆ ಒಳಗಾಗುತ್ತಿದ್ದರು. ಹಾಗಾಗಿ ಯಾರೇ ಗ್ರಾಹಕರು ದೇಶದ ಸ್ವಾತಂತ್ರ್ಯದ ಬಗ್ಗೆ ಮಾತನಾಡಿದರೂ ಸಾಕು ಅವರ ಪೂರ್ತಿ ಬಿಲ್ ಮನ್ನಾ ಆಗುತ್ತಿತ್ತು.

ಸ್ವಾತಂತ್ರ್ಯ ಹೋರಾಟದ ಬಗ್ಗೆ ಜನಜಾಗೃತಿಯನ್ನು ಮೂಡಿಸಲು ಪೈಯವರು ತನ್ನಿಂದಾದ ಅಳಿಲುಸೇವೆಯನ್ನು ಮಾಡುತ್ತಿದ್ದರು. ಆಗಾಗ ಅವರು ತಮ್ಮ ಹೋಟೆಲ್‌ನ ಆವರಣದಲ್ಲಿಯೇ ಯಕ್ಷಗಾನ, ತಾಳಮದ್ದಳೆ, ಹೂವಿನಕೋಲನ್ನು ಆಯೋಜಿಸುತ್ತಿದ್ದರು. ಹಾಗೆ ನಡೆಯುತ್ತಿದ್ದ ಎಲ್ಲ ಪ್ರಸಂಗಗಳು ದೇಶಭಕ್ತಿ, ರಾಷ್ಟ್ರೀಯ ಪ್ರಜ್ಞೆ, ಸ್ವಾತಂತ್ರ್ಯದ ಬಗ್ಗೆಯೇ ಇರುತ್ತಿದ್ದವು. ಪ್ರಸಂಗಗಳನ್ನು ನಡೆಸಲು ಬಂದವರಿಗೂ ವೀಕ್ಷಿಸಲು ಬಂದವರಿಗೂ ಪೈಯವರಿಂದ ವಿಶೇಷ ಆತಿಥ್ಯ. ತಮ್ಮ ಪುಟ್ಟ ಹೋಟೆಲ್‌ನಲ್ಲಿ ಯಾವತ್ತೂ ದೇಶಭಕ್ತಿಗಳನ್ನು ಹಾಡಿಕೊಂಡೇ ಕೆಲಸ ಮಾಡುತ್ತಿದ್ದರು. ಆಗಿನ್ನೂ ರಂಗಭೂಮಿಯ ಕನಸು ಕಾಣುತ್ತಿದ್ದ ಯುವಕ ಬಿ.ವಿ.ಕಾರಂತರನ್ನು ಕರೆಸಿ ವಿಟ್ಟು ಪೈ ಸ್ವಾತಂತ್ರ್ಯ ಚಳವಳಿಯ ಬಗ್ಗೆ ನಾಟಕವನ್ನೂ ಆಡಿಸಿದ್ದರು.

ತಮ್ಮ ಹೋಟೆಲ್‌ಗೆ ಬಂದವರಿಗೆ ಮಹಾತ್ಮ ಗಾಂಧಿ, ನೇತಾಜಿ ಸುಭಾಷ್‌ಚಂದ್ರ ಬೋಸ್, ಜವಾಹರ್‌ಲಾಲ್ ನೆಹರೂ, ಖಾನ್ ಅಬ್ದುಲ್ ಗಫಾರ್ ಖಾನ್, ಮೌಲಾನಾ ಆಜಾದ್, ವಿನೋಭಾ ಭಾವೆ ಅವರು ಈ ದೇಶಕ್ಕಾಗಿ ನಡೆಸುತ್ತಿರುವ ಹೋರಾಟದ ಬಗ್ಗೆ ಅತ್ಯಂತ ಹೆಮ್ಮೆಯಿಂದ ಕಥೆಗಳನ್ನು ಹೇಳುತ್ತಿದ್ದರು. ಹಾಗಂತ ಯಾರಾದರೂ ಬ್ರಿಟಿಷರ ಪರವಾಗಿ ಮಾತನಾಡಿದರೋ ಅವರನ್ನು ತಮ್ಮ ಹೋಟೆಲ್ ಮೆಟ್ಟಿಲು ಹತ್ತಲಿಕ್ಕೆ ಬಿಲ್‌ಕುಲ್ ಬಿಡುತ್ತಿರಲಿಲ್ಲ. ಪೊಲೀಸರಂತೂ ಇವರ ಹೋಟೆಲ್ ಹತ್ತಿರ ಸುಳಿಯುವಂತಿರಲಿಲ್ಲ. 'ನೀವೆಲ್ಲ ಬ್ರಿಟಿಷರ ಎಂಜಲು ತಿನ್ನುವವರು' ಎಂದು ಸಿಟ್ಟಿನಿಂದ ಕುದಿಯುತ್ತಿದ್ದರು ಎಂದು ಅವರ ಕುಟುಂಬದವರು ಈಗಲೂ ಸ್ಮರಿಸಿಕೊಳ್ಳುತ್ತಾರೆ.

ಕುಂದಾಪುರದ ಜನಮಾನಸದಲ್ಲಿ ವಿಟ್ಟು ಪೈ ಎಂದೇ ಖ್ಯಾತರಾಗಿದ್ದ ಅವರು ಪರಿಸರದಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಹೋರಾಟದಲ್ಲಿಯೂ ಸಕ್ರಿಯವಾಗಿ ಭಾಗಿಯಾಗುತ್ತಿದ್ದರು. ಶೇಂದಿ ಅಂಗಡಿ ಮುಂದೆ ಪಿಕೆಟಿಂಗ್, ಉಪ್ಪಿನ ಸತ್ಯಾಗ್ರಹದಲ್ಲೂ ಇವರು ಭಾಗವಹಿಸಿದ್ದರು. ಮುಂದೆ ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ ತೀವ್ರಗೊಂಡಾಗ ವಿಟ್ಟು ಪೈ ತಮ್ಮ ಹೋಟೆಲ್ ಮುಚ್ಚಿ ಹೋರಾಟಕ್ಕೆ ಇಳಿದುಬಿಟ್ಟರು. 'ಇದು ನಮ್ಮ ಮಾಡು ಮಡಿ ಯುದ್ಧ, ನಮ್ಮೆಲ್ಲರ ಅಸ್ತಿತ್ವದ ಪ್ರಶ್ನೆ. ನಮ್ಮ ಮುಂದಿರುವ ಕೊನೆಯ ಅಸ್ತ್ರ. ಬನ್ನಿ ಎಲ್ಲರೂ ಈ ಹೋರಾಟದಲ್ಲಿ ಭಾಗಿಯಾಗಿ' ಎಂದು ನಾರಾಯಣ ಖಾರ್ವಿ, ಅನಂತ ಕಾಮತ್ ಮೊದಲಾದವರ ಜೊತೆ ಸೇರಿ ಜನಜಾಗೃತಿ ಮೂಡಿಸುವ ಕೆಲಸ ಮಾಡಿದರು. ಆ ಸಂದರ್ಭದಲ್ಲಿ ಬೆತ್ತದ ರುಚಿ ತೋರಿಸಿದ ಪೊಲೀಸರು ಪೈ ಸೇರಿದಂತೆ ಏಳಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ ಜೈಲಿಗಟ್ಟಿದರು. ಉಡುಪಿ, ಕಾರ್ಕಳ, ಮಂಗಳೂರು ಹೀಗೆ ಜೈಲಿನಿಂದ ಜೈಲಿಗೆ ಇವರನ್ನು ವರ್ಗಾಯಿಸಿದರು. ಮತ್ತೆ ಅಲ್ಲಿಂದ ಬಳ್ಳಾರಿ ಜೈಲಿಗೆ ಸ್ಥಳಾಂತರಿಸಿದರು. ಅಲ್ಲಿಯೂ ತಮ್ಮ ದೇಶಪ್ರೇಮವನ್ನು ಅವರು ಬಿಡಲಿಲ್ಲ. ಅದರ ಫಲವಾಗಿ ಪೈ ಸತತ ಚಾಟಿಯೇಟಿನ ಶಿಕ್ಷೆಯನ್ನು ಅನುಭವಿಸಬೇಕಾಯಿತು.

ಅಂತಿಮವಾಗಿ ಬಳ್ಳಾರಿ ಜೈಲಿನಿಂದ ಪೈಯವರನ್ನು ಬಿಡುಗಡೆ ಮಾಡಲಾಯಿತು. ಊರಿಗೆ ಹೋಗಲು ಬ್ರಿಟಿಷ್ ಅಧಿಕಾರಿಗಳು ಇವರಿಗೆ ಹಣ ನೀಡಲು ಬಂದಾಗ ಕ್ರುದ್ಧರಾದ ಯುವ, ಬಿಸಿರಕ್ತದ ವಿಟ್ಟು ಪೈ ತಮ್ಮ ದೇಶದ ಪ್ರೇಮದ ಮುಂದೆ ಇವೆಲ್ಲ 'ಯಃಕಶ್ಚಿತ್' ಎಂದು ಧಿಕ್ಕರಿಸಿ ಅತ್ಯಂತ ಕಷ್ಟಪಟ್ಟು ಊರು ತಲುಪಿಕೊಳ್ಳುತ್ತಾರೆ. ಪತಿ ಇಡುವ ಪ್ರತಿ ಹೆಜ್ಜೆಯನ್ನು ಶ್ರದ್ಧೆಯಿಂದ ಅನುಸರಿಸಿದ, ಅವರನ್ನು ಬೆಂಬಲಿಸಿದ ವಿಠಲ ಪೈಯವರ ಪತ್ನಿ ಕೂಡ ಸೆರವಾಸ ಅನುಭವಿಸಿದ್ದರು. ಇವರ ಕುಟುಂಬ ಸತತ ಆರ್ಥಿಕ ಸಂಕಷ್ಟವನ್ನು ಎದುರಿಸಿದರೂ ತಮ್ಮ ದೇಶಪ್ರೇಮದ ವಿಚಾರದಲ್ಲಿ ಅವರು ಯಾವತ್ತೂ ರಾಜಿ ಮಾಡಿಕೊಳ್ಳಲಿಲ್ಲ.


ದೇಶಕ್ಕೆ ಸ್ವಾತಂತ್ರ್ಯ ಘೋಷಣೆಯಾದಾಗ ನರಿಬೇಣ ಮೈದಾನದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿ ಇವರು ಪಟ್ಟ ಸಂಭ್ರಮಕ್ಕೆ ಪರಿಯೇ ಇರಲಿಲ್ಲ. ಅದಾಗಿ ಮರು ವರ್ಷವೇ ಗಾಂಧಿಯವರ ಹತ್ಯೆ ಸಂಭವಿಸಿದಾಗ ಅವರು ಪಟ್ಟ ನೋವು ಅಪಾರ. ಸುದ್ದಿ ತಿಳಿದ ತಕ್ಷಣ ತಲೆ ಬೋಳಿಸಿಕೊಂಡ ಪೈಯವರು ಗಾಂಧಿ ಚಿತಾಭಸ್ಮವಿದ್ದ ಬೆಳ್ಳಿ ಕರಂಡಕದೊಂದಿಗೆ ಅದೇ ಮೈದಾನದಲ್ಲಿ ಸಭೆ ನಡೆಸಿ ಚಿತಾಭಸ್ಮವನ್ನು ಪಂಚಗಂಗಾವಳಿ ನದಿಯಲ್ಲಿ ವಿಸರ್ಜನೆ ಮಾಡುತ್ತಾರೆ.

ಮುಂದೆ ಕಡು ಕಷ್ಟದಜೀವನ ನಡೆಸಿದ ಪೈಯವರಿಗೆ ೧೯೭೨ರಲ್ಲಿ ಕೇಂದ್ರ ಸರ್ಕಾರ ಗೌರವ ನೀಡಿತು. ಇವರ ಪತ್ನಿಗೂ ಅಂದಿನ ಪ್ರಧಾನಿ ಇಂದಿರಾ ಗಾಂಧಿ ತಾಮ್ರಪತ್ರ ನೀಡಿ ಅವರ ದೇಶಪ್ರೇಮಕ್ಕೆ ಮನ್ನಣೆಯನ್ನು ನೀಡಿದರು.

❑

## ಅಧ್ಯಾಯ–೯
## ಪ್ರತಿ ಹೋರಾಟದ ಸ್ನೇಹಸೇತು ಗೋಪಾಲಕೃಷ್ಣ ಪೈ

ಬಸರೂರು ಮತ್ತು ಕುಂದಾಪುರದ ಸ್ವಾತಂತ್ರ್ಯ ಹೋರಾಟದ ಎಲ್ಲ ಕಾರ್ಯಕ್ರಮಗಳಲ್ಲಿ ಸ್ನೇಹಸೇತುವಿನಂತೆ ಇದ್ದವರು ಬಸರೂರು ವಿಲಾಸಕೇರಿಯ ಬಿ.ಗೋಪಾಲಕೃಷ್ಣ ಶೆಣೈ. ಗಾಂಧೀಜಿ ೧೯೨೦ ಮತ್ತು ೧೯೨೭ರಲ್ಲಿ ಎರಡು ಬಾರಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ಕೊಟ್ಟು ಹೋದ ಬಳಿಕ ಆದ



**ವಿಟ್ಟು ಪೈ**

ಬಹುದೊಡ್ಡ ಸಾಮಾಜಿಕ ಪರಿವರ್ತನೆಯ ಪ್ರಭಾವಕ್ಕೆ ಒಳಗಾದವರು ಅಸಂಖ್ಯಾತ ಜನ. ಅವರಲ್ಲಿ ಗೋಪಾಲಕೃಷ್ಣ ಶೆಣೈ, ಹಲ್ಸನಾಡು ಸೂರಪ್ಪಯ್ಯ, ಸುಬ್ಬಣ್ಣ ಶೆಟ್ಟಿಯವರಂತಹ ಅನೇಕ ಯುವಕರು ಕೂಡ ಸೇರಿದ್ದಾರೆ. ಮಂಗಳೂರಿನಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಸ್ವಯಂಪ್ರೇರಿತರಾಗಿ ಪಾಲ್ಗೊಂಡ ಶೆಣೈ ಅವರಂತಹ ಹತ್ತಾರು ಹುಡುಗರ ಭವಿಷ್ಯದ ದಾರಿಯೇ ಬದಲಾಗಿ ಹೋಯಿತು. ಅದು ಸಂಪೂರ್ಣ ಸ್ವಾತಂತ್ರ್ಯ ಹೋರಾಟದ ದಾರಿ.

೧೯೩೦ರಲ್ಲಿ ಮಂಗಳೂರಿನ ಉಪ್ಪಿನ ಸತ್ಯಾಗ್ರಹ ತೀವ್ರ ಸ್ವರೂಪವನ್ನು ಪಡೆದುಕೊಳ್ಳಲು ಕಾರಣರಾದವರು ನಾರಾಯಣ ಕಿಲ್ಲೆ, ಆರ್.ಕೆ.ಪ್ರಭು, ತಿಮ್ಮಪ್ಪ ರೈ, ಕಾರ್ನಾಡ್ ಸದಾಶಿವರಾವ್ ಮೊದಲಾದರು. ಈ ನಾಯಕರಲ್ಲಿದ್ದ ಬದ್ಧತೆ ಎಂಥವರಲ್ಲೂ ಸ್ಫೂರ್ತಿ ತುಂಬುತ್ತಿತ್ತು. ಪೊಲೀಸರು ಈ ಸತ್ಯಾಗ್ರಹಿಗಳ ವಿರುದ್ಧ ಕೈಗೊಂಡ ನಿರ್ದಾಕ್ಷಿಣ್ಯ ಕ್ರಮಗಳು ಜನರಲ್ಲಿ ಆಕ್ರೋಶಕ್ಕೆ ಕಾರಣವಾಗುತ್ತಿತ್ತು. ಕಾರ್ನಾಡ್ ಸದಾಶಿವರಾವ್ ಅವರನ್ನು ಉಪ್ಪಿನ ಸತ್ಯಾಗ್ರಹದ ಸ್ಥಳದಿಂದ ಬಂಧಿಸಿ ಕರೆದೊಯ್ಯುತ್ತಿದ್ದಾಗ ಅವರಲ್ಲಿದ್ದ ನಿರ್ಲಿಪ್ತ ಭಾವನೆಯೇ ಅನೇಕರಿಗೆ ಉತ್ತೇಜನ ನೀಡಿತ್ತು. ಇಂತಹ ಹೋರಾಟಗಳು ಪ್ರತಿ ತಾಲೂಕಿನಲ್ಲಿ ನಡೆಯಬೇಕು ಎಂಬ ದೃಢಸಂಕಲ್ಪಕ್ಕೆ ಬರುತ್ತದೆ ಗೋಪಾಲಕೃಷ್ಣ ಪೈ ಮತ್ತು ಅವರ ಹನ್ನೆರಡು ಮಂದಿಯ ತಂಡ. ಕುಂದಾಪುರಕ್ಕೆ ಮರಳಿದ ತಕ್ಷಣ ಉಪ್ಪಿನ ಸತ್ಯಾಗ್ರಹ ನಡೆಸುವ ತೀರ್ಮಾನ ಕೈಗೊಳ್ಳುತ್ತಾರೆ. ಕುಂದಾಪುರದ ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಇದೊಂದು ಮಹತ್ವದ ತಿರುವು ಎಂದೇ ಪರಿಗಣಿಸಲಾಗಿದೆ.

ಆ ಬಳಿಕ ಬಸರೂರು–ಕುಂದಾಪುರ ಸುತ್ತಮುತ್ತ ನಡೆದ ಎಲ್ಲ ಸತ್ಯಾಗ್ರಹಗಳಲ್ಲಿಯೂ ಗೋಪಾಲಕೃಷ್ಣ ಪೈ ಮತ್ತು ಅವರ ತಂಡ ಭಾಗಿಯಾಗುವುದು ಸಾಮಾನ್ಯವಾಗಿ ಹೋಯಿತು. ಮದ್ಯಪಾನ ವಿರೋಧಿ ಹೋರಾಟ, ವಿದೇಶಿ ಬಟ್ಟೆ ವಿರುದ್ಧ ಸಮರ, ಅಸ್ಪೃಶ್ಯತೆ ನಿವಾರಣೆ, ಕ್ವಿಟ್ ಇಂಡಿಯಾ ಚಳವಳಿ ಹೀಗೆ ನಮಗೆ ಸ್ವಾತಂತ್ರ್ಯ ಸಿಕ್ಕುವ ತನಕ ಎಲ್ಲ ಚಳವಳಿಗಳಲ್ಲೂ ಪೈ ಮುಂಚೂಣಿಯಲ್ಲಿ ನಿಲ್ಲುತ್ತಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಅವರು ಯಾರ ಗಮನಕ್ಕೂ ಬಾರದಂತೆ ಮಾಡುತ್ತಿದ್ದ ಇನ್ನೊಂದು ಕೆಲಸವಿತ್ತು; ಅದು ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಬುಲೆಟಿನ್‌ಗಳನ್ನು ಮನೆ ಮನೆಗೆ



ತಲುಪಿಸುತ್ತಿದ್ದ ಕೆಲಸ. ಪೊಲೀಸರ ಕಣ್ಣು ತಪ್ಪಿಸಿ ಆಯಕಟ್ಟಿನ ಭಾಗಗಳ ಮನೆಗಳಿಗೆ ಭೇಟಿ ನೀಡುವಲ್ಲಿ ಅವರು ಯಶಸ್ವಿಯಾಗುತ್ತಿದ್ದರು. ಕೊನೆಗೂ ಯಲ್ಲಾಪುರದಲ್ಲಿ ಅವರನ್ನು ಬಂಧಿಸಿ ಎಂಟು ದಿನಗಳ ಕಾಲ ಪೊಲೀಸ್ ಲಾಕಪ್ಪಿನಲ್ಲಿ ನೀಡಿದ ಹಿಂಸೆಗೆ ಹೋರಾಟದಿಂದಲೇ ವಿಮುಖವಾಗಬೇಕಿತ್ತು. ಆದರೆ ಹೋರಾಟ ಅವರ ರಕ್ತದಲ್ಲಿ ಸೇರಿಹೋಗಿತ್ತು. ಚಳವಳಿ ಅವರ ಉಸಿರಾಗಿತ್ತು. ಹಾಗಾಗಿ ಮತ್ತೆ ಅವರು ಆರು ತಿಂಗಳಿಗೂ ಹೆಚ್ಚು ಕಾಲ ಕಾರವಾರ ಜೈಲಿನಲ್ಲಿ ಕಳೆಯಬೇಕಾಯಿತು.

❑

## ಅಧ್ಯಾಯ-೧೦
## ಉಗ್ರ ಸೇನಾನಿ ಬಸ್ರೂರು ಸೂರಪ್ಪ ಶೆಟ್ಟಿ

ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳವಳಿಗಳೆಲ್ಲ ಮುಗಿದು ಬ್ರಿಟಿಷರು ಎರಡನೇ ಜಾಗತಿಕ ಯುದ್ಧದಂತಹ ಸಮಸ್ಯೆಗಳಲ್ಲಿ ಅಟಕಾಯಿಸಿಕೊಂಡಿದ್ದ ಸಂದರ್ಭದಲ್ಲಿ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು. ಎಲ್ಲಿ ನೋಡಿದರೂ ಅರಾಜಕತೆ. ಇದಕ್ಕೆ ಕಾರಣ ಮಹಾತ್ಮ ಗಾಂಧಿ ಅವರು ನೀಡಿದ 'ಮಾಡು ಇಲ್ಲವೇ ಮಡಿ' ಹೋರಾಟದ ಕರೆ. ಇದರಿಂದ ದೇಶದಲ್ಲಿ ಇದ್ದಕ್ಕಿದ್ದಂತೆ ಬಹಳ ದೊಡ್ಡ ಯುವಕರ ಪಡೆ ಸಿದ್ಧವಾಯಿತು. ಸಂಪರ್ಕ ವ್ಯವಸ್ಥೆಗೆ ಭಂಗವನ್ನುಂಟು ಮಾಡುವುದು, ಸೇತುವೆಗಳನ್ನು (ಆಗೆಲ್ಲ ಇದ್ದುದು ಬಹುತೇಕ ಮರದ ಸೇತುವೆಗಳು) ಮುರಿದು ಹಾಕುವುದು, ಸಾರಿಗೆ ವ್ಯವಸ್ಥೆಗೆ ಅಡ್ಡಿಯುಂಟು ಮಾಡುವುದು... ಹೀಗೆ ವಿಧ್ವಂಸಕ ಕೃತ್ಯಗಳು ಸೀಮಾತೀತವಾಗಿ ನಡೆದವು. ಬ್ರಿಟಿಷರಿಗೆ ಯಾವುದನ್ನೂ ನಿಯಂತ್ರಣಕ್ಕೆ ತರಲಾರದ ಪರಿಸ್ಥಿತಿ ನಿರ್ಮಾಣವಾಯಿತು. ಈ ಕಾಲಘಟ್ಟದಲ್ಲಿ ರಾತ್ರಿ ಹಗಲೆನ್ನದೆ ಅವಿರತವಾಗಿ ಕೆಲಸ ಮಾಡಿದವರ ಒಂದು ದಂಡೇ ಕುಂದಾಪುರದಲ್ಲಿತ್ತು. ಅವರಲ್ಲಿ ಬಸ್ರೂರು ಸೂರಪ್ಪ ಶೆಟ್ಟಿ, ಸುಬ್ಬಣ್ಣ ಶೆಟ್ಟಿ, ಹಾಲಾಡಿ ಮಹಾಬಲ ಶೆಟ್ಟಿ ಹಾಗೂ ಶೀನಪ್ಪ ಶೆಟ್ಟಿ, ಕೋಣಿ ಅಣ್ಣಪ್ಪಯ್ಯ ಕಾರಂತರಂತಹ ಚಳವಳಿಕಾರರ ತಂಡ ಇಡೀ ವ್ಯವಸ್ಥೆಯೇ ಬೆಚ್ಚಿ ಬೀಳುವ ರೀತಿಯಲ್ಲಿ ಕೆಲಸ ಮಾಡುತ್ತಿತ್ತು.

ಈ ಚಳವಳಿಕಾರರ ತಂಡ ಆರಂಭದಿಂದಲೂ ಸೌಮ್ಯ ಸ್ವರೂಪದಿಂದ ಹಿಡಿದು ಉಗ್ರ ಸ್ವರೂಪದ ತನಕ ಅನೇಕ ರೀತಿಯ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತ ಬಂದಿತ್ತು. ಹಾಗಾಗಿ ಅವರ ಬೆನ್ನ ಹಿಂದೆ ದೊಡ್ಡ ಅನುಭವವಿತ್ತು. ಅದಕ್ಕೆ



ತಕ್ಕಂತೆ ಅಪಾರವಾದ ಧೈರ್ಯವಿತ್ತು. ರಸ್ತೆಗೆ ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನೇ ಅಡ್ಡ ಹಾಕುವುದು, ದೂರಸಂಪರ್ಕದ ತಂತಿಗಳನ್ನು ಮುರಿದುಹಾಕುವುದು, ಬ್ರಿಟಿಷರು ನಿರ್ಮಾಣ ಮಾಡಿದ ಸಂಕಗಳಿಗೆ ಬೆಂಕಿ ಹಚ್ಚುವುದು, ಸಾರಾಯಿ ಅಂಗಡಿಗಳಿಗೆ ಹಾನಿ ಮಾಡುವುದು, ಸರ್ಕಾರಿ ಕಚೇರಿಗಳ ಮುಂದೆ ಏಕಾಏಕಿ ಪಿಕೆಟಿಂಗ್ ನಡೆಸುವುದು... ಯಾವ ಕೆಲಸಕ್ಕೂ ಇವರು ಅಂಜುತ್ತಿರುತ್ತಿರಲಿಲ್ಲ. ಕೆಲವರು ಭೂಗತರಾಗಿದ್ದುಕೊಂಡೇ ಇವೆಲ್ಲ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ರಾತ್ರಿ ಇದ್ದ ಸಂಕ ಬೆಳಗಾಗುವ ಹೊತ್ತಿಗೆ ಬೆಂಕಿಗೆ ಆಹುತಿಯಾಗಿರುತ್ತಿತ್ತು. ಮರುದಿನ ಆ ಮಾರ್ಗದಲ್ಲಿ ಓಡಾಟವೇ ಸಾಧ್ಯವಾಗುತ್ತಿರಲಿಲ್ಲ. ಗಂಗೊಳ್ಳಿ, ಕುಂದಾಪುರ, ಬೈಂದೂರು, ಅಮಾಸೇಬೈಲು, ಬಸ್ರೂರು, ಕೋಟೇಶ್ವರ ಭಾಗದಲ್ಲಿ ಇಂತಹ ರಹಸ್ಯ ಕಾರ್ಯಾಚರಣೆಗಳು ಅವ್ಯಾಹತವಾಗಿ ನಡೆಯುತ್ತಿದ್ದವು. ಪೊಲೀಸರಿಗೆ ಇವೆಲ್ಲವೂ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು.

ಹೀಗೆ ಒಂದಲ್ಲ ಒಂದು ಸತ್ಯಾಗ್ರಹ, ಚಳವಳಿಗಳಲ್ಲಿ ಭಾಗವಹಿಸಿ ಪೊಲೀಸರ ಲಾಠಿಯೇಟಿನ ರುಚಿ ತಿಂದು ತಿಂಗಳುಗಳ ಕಾಲ ಜೈಲಿನ ಕೋಣೆಗಳಲ್ಲಿ ಅಸಹನೀಯವಾದ ಜೀವನವನ್ನು ಅನುಭವಿಸಿ ಬಂದವರ ದೊಡ್ಡ ಪಟ್ಟಿಯೇ ಕುಂದಾಪುರ ತಾಲೂಕಿನಲ್ಲಿ ಸಿಗುತ್ತದೆ. ಕಳಂಜೆ ರಾಮಕೃಷ್ಣ ಭಟ್ಟ, ಕುಂದಾಪುರದ ರಾಘವೇಂದ್ರ ಶೆಣೈ, ಬಸ್ರೂರು ಸದಾಶಿವ ದೇವಾಡಿಗ, ಎನ್.ಎಸ್. ಶೇಷಗಿರಿರಾವ್, ಕಿರಿಮಂಜೇಶ್ವರದ ಚೌಕಿ ಸುಬ್ಬಯ್ಯ, ಯಡ್ತರೆ ಸುಬ್ಬಣ್ಣ ಶೆಟ್ಟಿ, ವಿಠಲ ಶೆಟ್ಟಿ, ರಾಮಕೃಷ್ಣ ಸುಬ್ರಾಯ ಭಟ್ಟ ಹೀಗೆ ಯಾವ ವರ್ಗ, ಸಮುದಾಯದ ಭೇದವೇ ಇಲ್ಲದೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ 'ಯೋಧ'ರಾದವರು ನೂರಾರು ಮಂದಿ. ಕೆಲವರ ಕಾರ್ಯಗಳು ಕಣ್ಣಿಗೆ ಗೋಚರವಾಗಿದ್ದರೆ, ಇನ್ನು ಕೆಲವರು ಅಗೋಚರವಾಗಿದ್ದೇ 'ಸೇನಾನಿ'ಗಳಾದರು. ದೇಶ ಸ್ವತಂತ್ರವಾಗಿ ಎಷ್ಟೋ ವರ್ಷಗಳ ಬಳಿಕ ಬಂದ ಸರ್ಕಾರಗಳು ಈ ಯೋಧರಿಗೆ ತಾಮ್ರಪತ್ರ ನೀಡಿ ಸಮ್ಮಾನಿಸಿವೆ. ಆದರೆ ಅಂತಹ ಯಾವ ಸನ್ಮಾನಕ್ಕೂ ಕೊರಳೊಡ್ಡದೇ ಸಾಮಾನ್ಯರಲ್ಲಿ ಸಾಮಾನ್ಯರಂತೆ ಇದ್ದವರ ಲೆಕ್ಕವನ್ನು ಇಡುವುದು ಸಾಧ್ಯವೇ ಹೇಳಿ?!

❑

**ಅಧ್ಯಾಯ–೧೧**

# ಸ್ವಾತಂತ್ರ್ಯ ಹೋರಾಟದ ಮಮತಾಮಯಿ ಉಮಾಬಾಯಿ ಕುಂದಾಪುರ

ತನ್ನ ೧೩ನೇ ವಯಸ್ಸಿನಲ್ಲಿ ಮದುವೆ, ೨೫ನೇ ವಯಸ್ಸಿಗೆ ವೈಧವ್ಯ, ೨೯ನೇ ವಯಸ್ಸಿಗೆ ಸ್ವಾತಂತ್ರ್ಯ ಹೋರಾಟ, ೩೦ನೇ ವಯಸ್ಸಿಗೆ ಸೇವಾದಳದ ನಾಯಕಿ ಪಟ್ಟ, ನಲವತ್ತನೇ ವಯಸ್ಸಿಗೆ ಜೈಲು ಶಿಕ್ಷೆ, ಬ್ರಿಟಿಷರಿಂದ ಚಿತ್ರಹಿಂಸೆ, ಭೂಗತರಾಗಿದ್ದ ಸ್ವಾತಂತ್ರ್ಯ ಹೋರಾಟಗಾರರಿಗೆ ತನ್ನ ಮನೆಯಲ್ಲೇ ಆಶ್ರಯ,



**ಉಮಾಬಾಯಿ ಕುಂದಾಪುರ,**
**೧೮೯೨–೧೯೯೨**



**ಉಮಾಬಾಯಿ ಕುಂದಾಪುರ**

ಭಗಿನಿ ಸಮಾಜ ನಿರ್ಮಾಣ... ಸ್ವಾತಂತ್ರ್ಯಾನಂತರ ಸರ್ಕಾರ ನೀಡಲು ಮುಂದೆ ಬಂದ ಎಲ್ಲ ಹುದ್ದೆ, ಗೌರವ, ಕೊಡುಗೆಗಳನ್ನು ಧಿಕ್ಕರಿಸಿ ಸರಳ ಜೀವನ.

ನೂರು ವರ್ಷಗಳ ಪರಿಪೂರ್ಣ ಜೀವನವನ್ನು ಉಮಾಬಾಯಿ ಕುಂದಾಪುರ ಎಂಬ ದಿಟ್ಟೆ ಬದುಕಿದ ರೀತಿಯಿದು. ಸಹನಾಮಯಿ ಉಮಾಬಾಯಿ ಅವರು ತಾನು ಜನಿಸಿದ ಭರತ ಭೂಮಿಗೆ ಸಲ್ಲಿಸಿದ ನಿಸ್ವಾರ್ಥ ಸೇವೆಯಿದು.


ಉಮಾಬಾಯಿ ಅವರ ಜನ್ಮನಾಮ ಭವಾನಿ ಗೋಳಿಕೇರಿ. ಮೂಲತಃ ಮಂಗಳೂರಿನವರಾದ ಕೃಷ್ಣರಾವ್ ಮತ್ತು ಜುಂಗಾಬಾಯಿ ಅವರ ಮಗಳಾದ ಭವಾನಿ ತಮ್ಮ ೧೩ನೇ ವಯಸ್ಸಿನಲ್ಲಿ ಮದುವೆಯಾಗಿದ್ದು ಕುಂದಾಪುರದ ಸಂಜೀವ್ ರಾವ್ ಅವರನ್ನು. ಅಲ್ಲಿಂದ ಬಳಿಕ ಅವರು ಉಮಾಬಾಯಿಯಾಗಿ ಬದಲಾದರು. ಮದುವೆಯ ಬಳಿಕ ಮುಂಬೈಗೆ ತೆರಳಿದ ಅವರಿಗೆ ಒಬ್ಬರು

ಗಾಡ್‌ಫಾದರ್ ಸಿಕ್ಕಿದರು. ಅವರು ಇನ್ನಾರೂ ಅಲ್ಲ, ಉಮಾ ಅವರ ಮಾವ ಆನಂದ ರಾವ್. ಆ ಹೊತ್ತಿಗೆ ಸಮಾಜ ಸುಧಾರಣೆ, ಮಹಿಳಾ ಸಬಲೀಕರಣದಲ್ಲಿ ಬಲವಾಗಿ ನಂಬಿಕೆಯನ್ನು ಹೊಂದಿದ್ದ ಅವರು ಮುಂಬೈನಲ್ಲಿ 'ಗೌಂಡ್‌ದೇವಿ ಮಹಿಳಾ ಸಮಾಜ'ವನ್ನು ಸ್ಥಾಪಿಸಿದ್ದರು. ಆನಂದ ರಾವ್‌ಗೆ ತಮ್ಮ ಕನಸುಗಳನ್ನು ಜಾರಿಗೆ ತರಲು ಸಿಕ್ಕವರು ಅವರ ಸೊಸೆ. ಆಕೆಗೆ ಸಂಪೂರ್ಣ ಬೆಂಗಾವಲಾಗಿ, ಪ್ರೇರಕಶಕ್ತಿಯಾಗಿ ನಿಂತ ಅವರು ಮುಂದಿನ ಶಿಕ್ಷಣವನ್ನು ಪಡೆಯಲು ಎಲ್ಲ ಸಹಕಾರವನ್ನು ನೀಡಿದರು. ಮೆಟ್ರಿಕ್ಯುಲೇಷನ್ ಮುಗಿಸಿದ ತಕ್ಷಣ ಉಮಾ ಮಹಿಳೆಯರಿಗೆ ಶಿಕ್ಷಣ ನೀಡುವುದಕ್ಕೆ ತಮ್ಮನ್ನು ತೊಡಗಿಸಿಕೊಂಡರು.

೧೯೨೦ ಅವರ ಜೀವನದ ಬಹುದೊಡ್ಡ ತಿರುವು. ಆ ವರ್ಷದ ಆಗಸ್ಟ್ ತಿಂಗಳ ಮೊದಲ ದಿನವೇ ಮುಂಬೈನಲ್ಲಿ ತೀರಿಕೊಂಡ ಲೋಕಮಾನ್ಯ ಬಾಲಗಂಗಾಧರ್ ತಿಲಕ್ ಅವರ ಅಂತಿಮ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಅವಕಾಶ. ಅಪ್ರತಿಮ ದೇಶಪ್ರೇಮಿ ತಿಲಕರಿಗೆ ಅಂತಿಮ ವಿದಾಯವನ್ನು ಕೋರಲು ಅಂದು ಮುಂಬೈನಲ್ಲಿ ಸೇರಿದ್ದ ಜನಸಾಗರವನ್ನು ಕಂಡು ಅವರು ನಿಬ್ಬೆರಗಾಗಿ ಹೋದರು. ಐದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದ ಮೆರವಣಿಗೆಯದು. ಕೆಲವೇ ಕೆಲವು ಪೊಲೀಸರು. ಆ ಜನಸ್ತೋಮ, ಕಾಂಗ್ರೆಸ್ ಕಾರ್ಯಕರ್ತರು, ಸ್ವಯಂಸೇವಕರು ಎಲ್ಲವನ್ನೂ ಸಂಘಟಿಸಿದ ರೀತಿಗೆ ಮಾರುಹೋದ ಉಮಾಬಾಯಿ ಆ ಕ್ಷಣದಲ್ಲೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಲು ನಿರ್ಧರಿಸಿಬಿಟ್ಟರು. ಮರುದಿನದಿಂದಲೇ ಖಾದಿ ಸೀರೆಯನ್ನು ತೊಡಲು ಶುರುಮಾಡಿದರು. 'ಸ್ವದೇಶಿ' ಎಂಬ ನಾಟಕವನ್ನು ಬರೆದು ಸ್ವತಃ ಅಭಿನಯಿಸಿದರು. ಮನೆಮನೆಗೆ ಹೋಗಿ ಮಹಿಳಾ ಸ್ವಯಂಸೇವಕರನ್ನು ನೇಮಕ ಮಾಡಿದರು.

ಇಂತಹ ಹೊತ್ತಿನಲ್ಲೇ ಪತಿ ಸಂಜೀವ ರಾವ್ ಕ್ಷಯರೋಗಕ್ಕೆ ಬಲಿಯಾಗುತ್ತಾರೆ. ಆಗ ಉಮಾಬಾಯಿ ಸಂತೈಕೆಗೆ ನಿಂತವರು ಅವರ ಮಾವ. ಬಳಿಕ ಮುಂಬೈನಿಂದ ಹುಬ್ಬಳ್ಳಿಗೆ ಬಂದ ಆನಂದ ರಾವ್ ಅಲ್ಲಿ ಕರ್ನಾಟಕ ಪ್ರೆಸ್ ಆರಂಭಿಸಿದರು. ಅದರ ಆವರಣದಲ್ಲಿ ಹೆಣ್ಣುಮಕ್ಕಳಿಗಾಗಿಯೇ 'ತಿಲಕ್ ಕನ್ಯಾಶಾಲೆ'ಯನ್ನು ಆರಂಭಿಸಿ ಅದರ ಸಂಪೂರ್ಣ ಹೊಣೆಯನ್ನು ಸೊಸೆಗೆ ವಹಿಸುತ್ತಾರೆ.





**ಬಾಲಗಂಗಾಧರ ತಿಲಕರ ಅಂತಿಮ ಮೆರವಣಿಗೆ**

ಆ ಹೊತ್ತಿಗೆ (೧೯೨೧) ಅಮೆರಿಕದಲ್ಲಿ ವೈದ್ಯ ವೃತ್ತಿಯಲ್ಲಿ ತೊಡಗಿದ್ದ ಡಾ.ಎನ್.ಎಸ್.ಹರ್ಡೀಕರ್ ಅವರು ಭಾರತಕ್ಕೆ ಮರಳಿ ಯುವಕರನ್ನು ಸಂಘಟಿಸುವ ಏಕೈಕ ಉದ್ದೇಶದಿಂದ ಹಿಂದುಸ್ತಾನಿ ಸೇವಾದಳವನ್ನು ಆರಂಭಿಸುತ್ತಾರೆ. ಹುಬ್ಬಳ್ಳಿ–ಧಾರವಾಡ ಸೇವಾದಳ ಮುಖ್ಯ ಕೇಂದ್ರವಾಗುತ್ತದೆ. ದೇಶದ ನಾನಾ ಭಾಗಗಳ ಯುವಕರು ಹುಬ್ಬಳಿಗೆ ಬಂದು ತರಬೇತಿಯನ್ನು ಪಡೆಯಲು ಆರಂಭಿಸುತ್ತಾರೆ. ಉಮಾಬಾಯಿ ಈ ಸೇವಾದಳದ ಮಹಿಳಾ ಘಟಕದ ನಾಯಕಿಯಾಗಿ ನೇಮಕ ಹೊಂದುತ್ತಾರೆ. ಅಲ್ಲಿಂದ ಮುಂದೆ ಸಾರ್ವಜನಿಕ ಬದುಕಿನಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಳ್ಳುತ್ತಾರೆ.

ಮುಂದಿನ ಮೂರೇ ವರ್ಷಗಳಲ್ಲಿ, ಅಂದರೆ ೧೯೨೪ರಲ್ಲಿ ಬೆಳಗಾವಿಯಲ್ಲಿ ಗಾಂಧಿ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಮಹಾ ಅಧಿವೇಶನ. ಅದೊಂದು ಐತಿಹಾಸಿಕ ಕಾರ್ಯಕ್ರಮ. ಆ ಅಧಿವೇಶನದ ಸಂಘಟನೆಯ ಹೊಣೆ ಹರ್ಡೀಕರ್ ಮತ್ತು ಉಮಾಬಾಯಿ ಹೆಗಲಿಗೆ. ಇದನ್ನು ದೊಡ್ಡ ಸವಾಲಾಗಿ ಸ್ವೀಕರಿಸಿದ ಉಮಾ, ಇಡೀ ರಾಜ್ಯ ಪ್ರವಾಸ ಮಾಡಿ ೧೫೦ಕ್ಕೂ

ಅಧಿಕ ಮಹಿಳಾ ಸ್ವಯಂಸೇವಕರನ್ನು ನೇಮಕ ಮಾಡುತ್ತಾರೆ. ಅವರಲ್ಲಿ ಅನೇಕರು ವಿಧವೆಯರು ಎನ್ನುವುದು ವಿಶೇಷ. ಈ ಪ್ರಮಾಣದಲ್ಲಿ ಮಹಿಳಾ ಸ್ವಯಂಸೇವಕರನ್ನು ನೇಮಕ ಮಾಡಿದ್ದು ಅದೇ ಮೊದಲು. ಮಿದು ಮಾತಿನ ಆದರೆ ಕಠಿಣ ನಿಲುವಿನ ಉಮಾಬಾಯಿ ತಮ್ಮ ಸಂಘಟನಾ ಚಾತುರ್ಯವನ್ನು ಸಾಬೀತುಪಡಿಸಿಬಿಡುತ್ತಾರೆ.

ಬೆಳಗಾವಿ ಅಧಿವೇಶನದ ಬಳಿಕ ಅವರ ಸ್ವಾತಂತ್ರ್ಯ ಹೋರಾಟ ಇನ್ನಷ್ಟು ತೀವ್ರಗೊಳ್ಳುತ್ತದೆ. ಉಮಾಬಾಯಿ ಅವರ ಹಿಂದೆ ಬಹುದೊಡ್ಡ ಮಹಿಳಾ ಸೈನ್ಯವೇ ಬಂದು ನಿಲ್ಲುತ್ತದೆ. ಪ್ರತಿಭಟನೆ, ಸತ್ಯಾಗ್ರಹ ನಿರಂತರವಾದಾಗ ೧೯೩೨ರಲ್ಲಿ ಉಮಾಬಾಯಿ ಅವರನ್ನು ಬಂಧಿಸಿ ಯರವಾಡ ಜೈಲಿಗೆ ತಳ್ಳುತ್ತಾರೆ ಪೊಲೀಸರು. ಈ ಸಂದರ್ಭದಲ್ಲಿಯೇ ಅವರ ಮಾವ ಆನಂದ ರಾವ್ ನಿಧನರಾಗುತ್ತಾರೆ. ಜೀವನದ ಎಲ್ಲ ಔನ್ನತ್ಯಕ್ಕೆ ಕಾರಣರಾದ ಮಾವನ ನಿಧನದ ಸುದ್ದಿ ಅವರನ್ನು ತಲುಪಿದಾಗ ವಾರವೇ ಕಳೆದುಹೋಗಿತ್ತು. ಹಾಗಿದ್ದೂ ಪೊಲೀಸರು ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಿಲ್ಲ. ಬದಲಾಗಿ, ಆನಂದ ರಾವ್ ನಡೆಸಿಕೊಂಡು ಬರುತ್ತಿದ್ದ ಕರ್ನಾಟಕ ಪ್ರೆಸ್ ಮತ್ತು ಹೆಣ್ಣುಮಕ್ಕಳ ಶಾಲೆಗೆ ಬೀಗ ಜಡಿಯುತ್ತಾರೆ. ಉಮಾಬಾಯಿ ಅವರೇ ನಡೆಸುತ್ತಿದ್ದ ಮಹಿಳಾ ಸಂಘಟನೆ 'ಭಗಿನಿ ಮಂಡಲ'ವನ್ನು ಕಾನೂನು ಬಾಹಿರ ಎಂದು ಘೋಷಿಸಲಾಗುತ್ತದೆ. ತಮ್ಮ ಜೈಲು ಶಿಕ್ಷೆಯನ್ನು ಮುಗಿಸಿ ಹೊರಬಂದ ಉಮಾಬಾಯಿ ಅವರಿಗೆ ಇದ್ದುದು ಹುಬ್ಬಳ್ಳಿಯ ಚಿಕ್ಕದೊಂದು ಮನೆ ಮಾತ್ರ. ಆದರೆ ಅವರು ಎಲ್ಲವನ್ನೂ ನಿರ್ಲಿಪ್ತವಾದ ಮನಸ್ಸಿನಿಂದ ಎದುರಿಸುತ್ತಾರೆ.

ಬಂಧನದ ಅವಧಿ ಮುಗಿದು ಹೊರಬಂದವರಿಗೆ ವಿಶ್ರಮಿಸಲು ಸಮಯವೇ ಇರಲಿಲ್ಲ. ಆ ಹೊತ್ತಿನಲ್ಲಿ ಕರನಿರಾಕರಣೆ ಮತ್ತು ಉಪ್ಪಿನ ಸತ್ಯಾಗ್ರಹ ಉಗ್ರ ಸ್ವರೂಪವನ್ನು ಪಡೆದುಕೊಂಡಿತ್ತು. ದೇಶದ ಮೂಲೆ ಮೂಲೆಯಲ್ಲಿ ಪ್ರತಿಭಟನೆಗಳು ನಿತ್ಯದ ಮಾತಾಗಿತ್ತು. ಪೊಲೀಸರು ಸತ್ಯಾಗ್ರಹಿಗಳನ್ನು ಮನಬಂದಂತೆ ಥಳಿಸುತ್ತಿದ್ದರು, ಹಿಡಿದು ಜೈಲಿಗೆ ಅಟ್ಟುತ್ತಿದ್ದರು. ಇವರಲ್ಲಿ ಬಹುತೇಕರು ಹಿಂದುಸ್ತಾನಿ ಮಹಿಳಾ ಸೇವಾದಳದ ಕಾರ್ಯಕರ್ತರು. ಜೈಲಿನಿಂದ ಬಿಡುಗಡೆಯಾಗಿ ಹೊರಬರುತ್ತಿದ್ದ ಅಷ್ಟೂ ಮಂದಿಗೆ ಆಶ್ರಯ ಒದಗಿಸಿ, ಊಟ, ತಿಂಡಿ ನೀಡಿ ಅಮ್ಮನಂತೆ ಆರೈಕೆ ಮಾಡಿದ್ದು ಮಾತ್ರವಲ್ಲದೆ ಮರಳಿ ಊರಿಗೆ



ತೆರಳಲು ಹಣದ ಸಹಾಯ ಮಾಡಿದವರು ಉಮಾಬಾಯಿ. ಟಾಂಗಾವಾಲಾಗಳೂ ಸೇರಿದಂತೆ ಇಂತಹ ನೂರಾರು ಕಾರ್ಯಕರ್ತರ ಪಾಲಿಗೆ ಉಮಾ ಮಮತಾಮಯಿಯಾಗಿದ್ದರು.

೧೯೩೪ರ ಜನವರಿ ೧೫ರಂದು ಬಿಹಾರದಲ್ಲಿ ಬರಸಿಡಿಲಿನಂತೆ ಎರಗಿದ್ದು ಭೂಕಂಪ. ಮೊದಲೇ ಹಿಂದುಳಿದ ರಾಜ್ಯವಾಗಿದ್ದ ಬಿಹಾರ ಈ ಪ್ರಾಕೃತಿಕ ವಿಕೋಪದಿಂದ ತತ್ತರಿಸಿ ಹೋಗುತ್ತದೆ. ಸುಮಾರು ಹನ್ನೆರಡು ಸಾವಿರ ಮಂದಿ ಸಾವನ್ನಪ್ಪುತ್ತಾರೆ. ಲಕ್ಷಾಂತರ ಜನ ನಿರಾಶ್ರಿತರಾಗುತ್ತಾರೆ. ಹಲವು ನಗರಗಳೇ ನಿರ್ನಾಮವಾಗುತ್ತವೆ. ಇಂತಹ ಕೆಟ್ಟ ಸನ್ನಿವೇಶದಲ್ಲಿ ತಮ್ಮ ಮಹಿಳಾ ಸ್ವಯಂಸೇವಕರ ದಂಡಿನೊಂದಿಗೆ ಸ್ವಯಂಪ್ರೇರಣೆಯಿಂದ ಬಿಹಾರಕ್ಕೆ ಧಾವಿಸಿದ ಉಮಾಬಾಯಿ ಆ ಜನರ ಕಣ್ಣೀರು ಒರೆಸುವ ಕಾರ್ಯದಲ್ಲಿ ತೊಡಗುತ್ತಾರೆ. ಹಗಲಿರುಳೂ ದಣಿವರಿಯದೇ ಸೇವೆ ಸಲ್ಲಿಸುತ್ತಾರೆ. ಇವರ ನಿಸ್ವಾರ್ಥ ಸೇವೆಯನ್ನು ಕಂಡು ರಾಷ್ಟ್ರೀಯ ನಾಯಕರಾದ ರಾಜೇಂದ್ರ ಪ್ರಸಾದ್ ಮತ್ತು ಆಚಾರ್ಯ ಕೃಪಲಾನಿ ಬೆರಗಾಗುತ್ತಾರೆ.

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬ್ರಿಟಿಷ್ ಅಧಿಕಾರಿಗಳು, ಪೊಲೀಸರು ಸತ್ಯಾಗ್ರಹಿಗಳನ್ನು ಕಂಡರೆ ಉರಿದುಬೀಳುತ್ತಿದ್ದರು. ನಿರ್ದಯವಾಗಿ ದಂಡಿಸುತ್ತಿದ್ದರು. ಇಂತಹ ಸಂದರ್ಭದಲ್ಲಿ ತಲೆತಪ್ಪಿಸಿಕೊಂಡು ತಿರುಗುತ್ತಿದ್ದ ಅನೇಕ ಮಂದಿ ಕಾರ್ಯಕರ್ತರಿಗೆ ಅಮ್ಮನಂತೆ ತುತ್ತು ತಿನ್ನಿಸಿದವರು ಉಮಾಬಾಯಿ. ಸ್ವಾತಂತ್ರ್ಯ ಬರುವುದಕ್ಕೆ ಒಂದು ವರ್ಷ ಮೊದಲು ಗಾಂಧೀಜಿ ಅವರು ಸ್ಥಾಪಿಸಿದ ಕಸ್ತೂರ್ಬಾ ಟ್ರಸ್ಟ್‌ನ ಕರ್ನಾಟಕ ಶಾಖೆಗೆ ಉಮಾ ಅವರನ್ನು ಪ್ರತಿನಿಧಿಯಾಗಿ ನೇಮಕಮಾಡಲಾಗುತ್ತದೆ. ಆರೋಗ್ಯ ಕಾರ್ಯಕ್ರಮಗಳು, ಮಕ್ಕಳ ಕಲ್ಯಾಣ, ವಯಸ್ಕರ ಶಿಕ್ಷಣದಂತಹ ಕಾರ್ಯಕ್ರಮಗಳಲ್ಲಿ ಗ್ರಾಮಸೇವಕರಿಗೆ ತರಬೇತಿ ನೀಡಿ ಗ್ರಾಮೀಣ ಅಭಿವೃದ್ಧಿಗೆ ಸಹಕರಿಸುವುದು ಈ ಟ್ರಸ್ಟ್‌ನ ಮುಖ್ಯ ಉದ್ದೇಶವಾಗಿತ್ತು. ಆದರೆ ಇಂತಹ ಸಂಘಟನೆಗೆ ಸರ್ಕಾರದಿಂದ ಯಾವುದೇ ಬಿಡಿಗಾಸೂ ಸಿಗುತ್ತಿರಲಿಲ್ಲ. ಇದನ್ನೊಂದು ಸವಾಲಾಗಿ ಸ್ವೀಕರಿಸಿದ ಉಮಾಬಾಯಿ ಅವರು ಅಕ್ಷರಶಃ ಭಿಕ್ಷೆ ಬೇಡಿ ನಿಧಿ ಸಂಗ್ರಹ ಮಾಡುತ್ತಾರೆ. ಮೊದಲು ನಿರ್ಗತಿಕರು, ಅನಾಥರು, ಯುವವಿಧವೆಯರು, ಅವಿವಾಹಿತ ಅನಾಥರು ಮತ್ತು ಇತರ ನತದೃಷ್ಟ ಮಹಿಳೆಯರನ್ನು ನೇಮಕ ಮಾಡಿಕೊಂಡು ಅವರಿಗೆ ಬದುಕನ್ನು

ನೀಡುವ ಕಲೆ, ಕರಕುಶಲ ಕಲೆಗಳ ತರಬೇತಿಯನ್ನು ನೀಡುತ್ತಾರೆ. ಅವರ ಜೀವನೋದ್ಧಾರಕ್ಕೆ ಕಾರಣರಾಗುತ್ತಾರೆ. ಆ ಕಾಲದಲ್ಲಿ ಉಮಾಬಾಯಿ ಅವರು ಮಹಿಳೆಯರ ಪಾಲಿಗೆ ನಿಜವಾದ ಕಣ್ಮಣಿಯಾಗುತ್ತಾರೆ.

ದೇಶ ಸ್ವಾತಂತ್ರ್ಯ ಗಳಿಸಿದ ಬಳಿಕ ಅನೇಕ ಪ್ರಶಸ್ತಿ–ಪುರಸ್ಕಾರ, ಹುದ್ದೆ, ಸೌಲಭ್ಯ ಎಲ್ಲವೂ ಅವರನ್ನು ಹುಡುಕಿಕೊಂಡು ಬಂದವು. ಸ್ವಾತಂತ್ರ್ಯ ಹೋರಾಟಗಾರರನ್ನು ಗೌರವಿಸುವ ತಾಮ್ರಪತ್ರಗಳನ್ನೂ ತಿರಸ್ಕರಿಸಿದರು, ಪಿಂಚಣಿಯೂ ಬೇಡವೆಂದರು. ಹುಬ್ಬಳ್ಳಿಯಲ್ಲಿ ತಮ್ಮ ಮಾವನ ಸ್ಮರಣಾರ್ಥ ನಿರ್ಮಿಸಲಾದ 'ಆನಂದ ಸ್ಮೃತಿ' ಎನ್ನುವ ಸಣ್ಣ ಕುಟೀರದಲ್ಲಿ ತಮ್ಮ ಕೊನೆಯ ದಿನಗಳನ್ನು ಕಳೆದ ಉಮಾಬಾಯಿ ಅವರು ಬದುಕಿದ್ದು ಭರ್ತಿ ನೂರು ವರ್ಷ (೧೮೯೨–೧೯೯೨). ಉಮಾಬಾಯಿ ಮೂಲತಃ ಮಂಗಳೂರಿನವರಾಗಿ ಹುಬ್ಬಳ್ಳಿಯಲ್ಲಿ ತಮ್ಮ ಜೀವನದ ಸಾರ್ಥಕ್ಯವನ್ನು ಕಂಡರೂ ಕೂಡ ಅವರು ಕುಂದಾಪುರದ ಸೊಸೆ ಎಂಬ ಹೆಮ್ಮೆ ನಮ್ಮದು.

❑

**ಇಲ್ಲಿನ ಬರಹಗಳಿಗೆ ಆಧಾರವನ್ನು ಒದಗಿಸಿದ ಲೇಖನಗಳು, ಕೃತಿಗಳು.**

- ೧೯೯೪ರಲ್ಲಿ ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜು ಪ್ರಕಟಿಸಿದ 'ಕುಂದಾಪುರ ತಾಲೂಕು– ಒಂದು ಅಧ್ಯಯನ.'
- ೧೯೯೭ರಲ್ಲಿ ಬಸರೂರಿನ ಶಾರದಾ ಕಾಲೇಜು ಪ್ರಕಟಿಸಿದ 'ಹೆಸರಾದ ಪಟ್ಟಣ ಬಸ್ರೂರು ಒಂದು ಅಧ್ಯಯನ.'
- ಕುಂದಾಪುರದ ಜನಪ್ರಿಯ ವಾರಪತ್ರಿಕೆ 'ಕುಂದಪ್ರಭ'ದಲ್ಲಿ ಪ್ರಕಟವಾದ ಲೇಖನಗಳು.
- ಕನರಾಡಿ ವಾದಿರಾಜ ಭಟ್ಟ ಅವರು ಬರೆದಿರುವ– 'ಕುಂದಾಪುರ ತಾಲೂಕು ದರ್ಶನ'.
- ಅಂತರ್ಜಾಲದಲ್ಲಿ ಲಭ್ಯವಾದ ಮಾಹಿತಿಗಳು, ದಿ ಹಿಂದೂ, ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ವರದಿಯ ತುಣುಕುಗಳು.
- ಕರ್ನಾಟಕ ವಿಷಯ ವಿಶ್ವಕೋಶ

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |